ಶ್ರೀರಸ್ತು

ಅರಮನೆ ಮುಜರಾಯಿ ಭಕ್ಷೀರು

ಹೆಚ್. ಲಿಂಗರಾಜೇಅರಸಿನವರಿಂದ

ನೂತನವಾಗಿ ರಚಿಸಲ್ಪಟ್ಟ

ಕರ್ಣಾಟಕ

ರಾಮಾಯಣ ಸಂಗ್ರಹದ

ಅರಣ್ಯಕಾಂಡವು

ಮೈಸೂರು

ಆಸ್ಥಾನ ಮಹಾವಿದ್ವಾನ್

ಪಿ. ಆರ್. ಕರಿಬಸವಶಾಸ್ತ್ರಿಗಳಿಂದ

ಪರಿಶೋಧಿಸಲ್ಪಟ್ಟ

ಮೈಸೂರು:

ಶ್ರೀನಿವಾಸ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟಿತು

1917.

PRINTED BY

S. NANJUNDA SASTRY

AT THE SREENIVASA PRESS, MYSORE.

ಓಂ

ಶ್ರೀಗುರುದಕ್ಷಿಣಾಮೂರ್ತಯೇ ನಮಃ.

ಕನ್ನಡ

ರಾಮಾಯಣ ಸಂಗ್ರಹವು.

ಅರಣ್ಯಕಾಂಡವು.

ಸೂಚನೆ|| ತೆರಳುವೆಡೆಯೊಳಗರಿವಿರಾಧನ |
ತರಿದುನೇಹದೊಳಾಜಟಾಯುವ |
ಬೆರೆದು ರಾಮನು ಪಂಚವಟಿಯನು ಸಾರ್ದನೊಲವಿನಲಿ ||

ತೆರಳಿದರು ವರಚಿತ್ರಕೂಟದ |
ಗಿರಿಯಿನಾ ರಾಘುವರು ಜತೆಯಲಿ |
ಧರಣಿಜಾತೆಯುಮ್ಮೈದೆ ಮೆರೆವಾ ದಂಡಕಾವನಕೆ ||
ಪರಿಪರಿಯ ತರು ಗುಲ್ಮಲತೆಗಳ |
ನೆರವಿಯಿಂ ನಾನಾ ವಿನೋದದಗೆ |
ಚರಿಸುತಿಹ ಮೃಗಪಕ್ಷಿ ನಿಕರದಿನೆಸೆದುದಾಬನವು ||೧||

ಅಂದು ಭಗವನ್ನಾಮ ಕೀರ್ತನ ।
ದಿಂದ ಕಾಲವ ಕಳೆವ ಮುನಿಜನ ।
ವೃಂದ ಕಂಡುದು ಬಂದುದಿವರಾರೆನುತ ಮುಸುಕಿದುದು ॥
ಸುಂದರಾಂಗರ ನೋಡೆ ಬಾಹುಜ ।
ರಂದದಿಂ ತೋರುವರು ಕೇಳುವೆ ।
ವೆಂದು ಕೈಗಳಮುಗಿದು ನುಡಿಸಿದರಂದು ರಾಘವನ ॥ ೧॥

ರಾಯ ನೀನಾರಡವಿಪರಿಯಂ ।
ತಾಯಸವು ನಿನಗೇಕೆ ತಾನೀ ।
ತೋಯಜಾಕ್ಷಿಯದಾರು ನಿನಗೀ ಸುಮುಖನೇನಹನು ॥
ಆಯಿತಿಲ್ಲಿಗೆ ಬರವದೇಕಿದ ।
ರಾಯತವ ನಮಗರುಹಬೇಕೆನು ।
ತಾ ಯಮೀಂದ್ರರು ನುಡಿಸಲೆಂದನು ರಾಮನನುನಯದೆ ॥ ೨॥

ಕೇಳಿರೈ ಋಷಿಗಳಿರ ನೃಪಜನ ।
ಪಾಳಿ ದಶರಥನೆನ್ನ ಜನಕನು ।
ತಾಳಿಹೆನು ನೇಮವನು ಪದಿನಾಲ್ಕಬುದ ಮಡವಿಯಲಿ ॥
ಕಾಲ ಕಳೆಯುವೆನೆನುತ ತನಗೀ ।
ಲೋಲಲೋಚನೆಯರಸಿತಾನತಿ ।
ಶೀಲವತಿಯೆನ್ನೊಡನೆ ಬಂದಳು ಯುವತಿ ವಿಮಲಮತಿ ॥ ೪॥

ರಾಮನೆಂದಪರೆನ್ನನೀತಂ ।
ಪ್ರೇಮಸೋದರ ಲಕ್ಷ್ಮಣನು ಮೇ ।
ಣ್ಣಾಮಿನಿಯುನೀಕೆಯನು ಕರೆವರು ಸೀತೆಯೆಂದೆನುತೆ ॥
ಈಮಹಾವನದೊಳು ತಪೋಜಪ ।
ಹೋಮಗಳ ನೆಸಗುತ್ತಮೆಂದುಂ ।
ಕ್ಷೇಮದಿಂದಿಹಿರೇನು ಬೆಸಸುವುದೆಂದನಾ ನೃಪತಿ ॥೫॥

ಕ್ಷಮಿಸುವುದು ಸರ್ವಾಪರಾಧನ ।
ನಮಿಸುವೆವು ನಿನಗಿಂದು ರಾಘವ ।
ಕುಮತಿಗಳಿಗೆಮಗೆಲ್ಲಿ ಗೋಚರ ವಹುದು ತವಪದವು ।
ಅಮಿತತೋಷಿಗಳಾದೆವೀದಿನ ।
ಮಮತೆದೋರುತ್ತೆಮ್ಮ ಪುಣ್ಯಾ ।
ಶ್ರಮಕೆ ಬಿಜಯಂಗೈದು ಸತ್ಕಾರವನು ಕೊಂಬುವುದು ॥೬॥

ಎನುತ ಕರೆದೊಯ್ಯುತ್ತಲವರನು ।
ಘನಮನೋಹರ ಪರ್ಣಮಂದಿರ ।
ಕನುವಿನಿಂದರ್ಘ್ಯಾದಿ ಸತ್ಕಾರಗಳ ನಂದೆಸಗಿ ॥
ವನದೆ ದೊರೆವಾ ಕಂದಮೂಲವ ।
ವಿನಯದಿಂದಾಹಾರಕೀಯು ।
ತ್ತನುಪಮನನತಿವರುಪಚರಿಸಿದರುಭಕ್ತಿಭಾವದೊಳು ॥೭॥

ಕಳೆಯುತಂದಿನರಾತ್ರಿಯನು ಮುನಿ ।
ನಿಳಯದಲಿ ತಾವೆಳ್ದು ಮರುದಿನ ।
ಜಲಜಸಖನುದಯದಲಿ ಸಂಧ್ಯಾಕರ್ಮಗಳ ನೆಸಗಿ ॥
ತಳುವದವರನುಮತಿಯ ಕೈಕೊಂ ।
ಡುಳಿಯದೈದುತ್ತಿರಲು ಮುಂಗಡೆ ।
ಯೊಳಗೆ ನಿಂತನು ಖಳವಿರಾಧನೆನಿಪ್ಪ ದಾನವನು ॥೮॥

ಎಳೆಯರಿರ ನೀವಾರು ನಿಮಗೀ ।
ಲಲನೆಯೇನಹ ಳೆತ್ತ ಪೋಪಿರಿ ।
ಕಳೆದುದಲೆ ನಿಮ್ಮಾಯುವಿಂದಿಗೆ ನಿಲ್ಲಿರೆಂದೆನುತ ॥
ಪಲುಮೊರೆಯುತಾಡೊತ್ತಿ ವೇಗದಿ ।
ನಿಳೆಯಣುಗಿಯೆಡೆಗೈದಿ ಪಿಡಿಯು ।
ತ್ತಿಲೆಗೆ ನಿನಗಾನೊಲಿದೆ ನಿಂದೆನ್ನಂಕವೇರೆನಲು ॥೯॥

ಕಂಡು ಲಕ್ಷ್ಮಣನಣ್ಣದೇವನ ।
ಖಂಡವೈಭವಲಕ್ಷ್ಮಿಗಿಂತೀ ।
ಭಂಡ ದೈತ್ಯಾಧಮನ ತೊಡೆ ತಾನಾಯ್ತೆ ಗತಿಯೆನುತ ॥
ಕೆಂಡಮುಗುಳುತ ನೇತ್ರದಲಿ ಕೋ ।
ದಂಡಕೇರಿಸಿ ಹೆದೆಯ ಬಾಣವ ।
ಕೊಂಡು ಜೋಡಿಸುವನಿತರೊಳು ಮುಂಕೊಂಡು ಬಂದಿವರ ॥

ಪಿಡಿಯುತೇರಿಸಿ ಹೆಗಲ ನಸುರನು ।
ಬಿಡುತ ತನ್ನನು ಮುಂದೆ ನಡೆಯುವ ।
ಸಡಗರವ ಕಂಡಂಜಿ ಸೀತೆಯು ಬೆದರಿ ಕೂಗಿದಳು ॥
ತಡವಗೈವರೆ ರಮಣ ದುರುಳನ ।
ಕಡಿಯುಬೇಗದೊಳಲ್ಲದಿರಲೆ ।
ನ್ನೊಡೆಯ ತನ್ನನೆ ಕಡಿದು ಮುಂದಕೆ ತೆರಳು ನೀನೆನುತ ॥೧೧॥

ಲಲನೆಭಯದಿಂದುಲಿದನುಡಿ ತಾ ।
ನಲಗಿನಂದದೊಳೆದೆಯ ನಿರಿಯ ।
ಲ್ಕೆಲದೊಳಿಹ ಲಕ್ಷ್ಮಣನಿಗೆಚ್ಚರಿಸಿದನು ರಾಘವನು ॥
ಸೆಳೆಯುತಿರ್ವರು ಕಡುಗಗಳನಾ ।
ಖಳನಭುಜಗಳನರಿದು ದುಮ್ಮಿ ।
ಕ್ಕಿಳೆಗೆ ಶರಗಳನಿರದೆ ದಳೆದರು ದುರುಳನಂಗದಲಿ ॥೧೨॥

ಅಂದು ಬೀಳುತ ನೆಲದಮೇಲವ ।
ನೆಂದನಾರ್ಯೆ ನೀವು ಸರಳುಗ ।
ಳಂದವಚ್ಚರಿ ಸಹಿಸಲಸದಳವಿದಲೆ ತನಗಿನ್ನು ॥
ಸುಂದರಾಂಗನು ರಾಮನೆಂಬುವ ।
ನಿಂದು ನಿಮ್ಮೊಳಗಾವನೈ ಅರ ।
ವಿಂದನಾಭನದಿವ್ಯಮೂರ್ತಿಯ ತೋರ್ಪುದೆನಗೆಂದ ॥೧೩॥

ಇಂತುನುಡಿವ ವಿರಾಧನಿದಿರೊಳ |
ನಂತಮಹಿಮನು ನಿಂದುಸಲೆ ನಿ |
ನ್ನಂತರಂಗವದೇನು ಪೇಳನ್ನಾನೆ ರಾಘುವನು ||
ಚಿಂತೆಯುಳಿಯೆನಲೊಡನವನು ನಿ |
ಶ್ಚಿಂತನಾಗುತ ದಿವ್ಯತೇಜೋ |
ವಂತನಹಗಂಧರ್ವ ಪುರುಷನರೂಪನೊಂದುತಲಿ ||೧೪||

ಕ್ಷಮಿಸುವುದು ಜಗದೀಶಬುದ್ಧಿ |
ಭ್ರಮಣೆಯಿಂ ನಾಂಗೈದ ತಪ್ಪನು |
ವಿಮಲಮತಿಯವಧರಿಸು ತನ್ನಯ ಪೂರ್ವಸಂಗತಿಯ ||
ಕಮಲಜನಬಳಿಗೆಂದು ರಂಭೆಯು |
ಗಮಿಸುತಿರಲೊಂದಿರುಳು ಮಾರ್ಗದೆ |
ಕುಮತಿಯಿಂ ನಾನವಳಕೆಣಕಲು ವಿಧಿಯುಖತಿಗೊಂಡು ||೧೫||

ಎಲವೊಲೊಗಂಧರ್ವಕನೆ ತುಂಬುರು |
ಬಲುಹಿನಿಂನೀನಿವಳ ನಿಯಮವ |
ನಳಿದಕಾರಣ ರಾಕ್ಷಸಾಧಮನಾಗೆನುತ ಶಪಿಸೆ ||
ಬಳಿಕನಾನತಿ ದೀನಭಾವದಿ |
ನೊಲಿಸೆ ನುಡಿದನು ಮುಂದೆಭಾಸ್ಕರ |
ಕುಲದೊಳುದಯಿಪ ಪುರುಷನಿಂ ನಿನಗಪ್ಪುದಭ್ಯುದಯ ||೧೬||

ಒಂದುಕಾಲದಿ ರಾಮಲಕ್ಷ್ಮಣ ।
ರಿಂದು ಮುಖಿಯಹ ಸೀತೆಯೊಡನೈ ।
ತಂದು ನೀನಿಹದಂಡಕಾವನದಲ್ಲಿ ಚರಿಸುವರು ॥
ಅಂದು ನೀನಾಲಲನೆಯನು ಬಲು ।
ಹಿಂದ ಪಿಡಿಯಲು ರಾಮನಾಗ್ರಹ ।
ದಿಂದ ಬಾಣವನೆಸೆಯಲೊಂದುವೆ ಮತ್ತೆ ನಿಜತನುವ ॥೧೭॥

ಇಂತು ಪೇಳ್ದ ಪಿತಾಮಹನ ನುಡಿ ।
ಯಂತೆ ನಿನ್ನಿಂದಿಂದು ಬದುಕಿದೆ ।
ನೆಂತು ನಿನ್ನುಪಕೃತಿಯ ಮರೆವೆನಪಾರ ಗುಣನಿಲಯ ॥
ಮುಂತೆ ನೀಂ ತೆರಳುತ್ತೆ ಕಾಣುವೆ ।
ಶಾಂತರಹ ಶರಭಂಗಮುನಿಪರ ।
ನಂತರಾತ್ಮಧ್ಯಾನ ಪರರವರಿಂದ ಲೇಸಹುದು ॥೧೮॥

ತೆರಳಿ ನೀವೆಂದೆನುತ ಖಚರನು ।
ಮರಳಲತ್ತಲು ದಾನವಕಳೇ ।
ವರವ ನದನಿಳೆಯೊಳಗೆ ನಿಕ್ಷೇಪಿಸಿ ಬಳಿಕ್ಕವರು ॥
ಸರಸಿಜಾಕ್ಷಿಯ ಬಳಿಯಸೇರುತ ।
ಲೊರಸುತಾಕೆಯ ಮನದ ಭೀತಿಯ ।
ನಿರದೆ ಪಯಣವಬೆಳಸುತಾ ಶರಭಂಗನಾಶ್ರಮವ ॥೧೯॥

ಕಂಡು ಸಾರುವ ಸಮಯದೊಳಗಾ |
ಖಂಡಲನು ನಭದೊಳ್ವಿಮಾನದೆ |
ಮಂಡಿಸುತಲಾಶ್ರಮದೊಳಿಹ ಮುನಿಯೊಡನೆ ಭಾಷಿಸುತ ||
ಚಂಡಬಲರಿವರ್ಬದೆ ಕಾಣು |
ತ್ತಂಡಿಸುತ ಮನದಲ್ಲಿ ತಾಂ ಮರೆ |
ಗೊಂಡು ಜಾರಲು ನೋಡಿ ವಿಸ್ಮಯಗೊಳುತ ರಾಘವನು || ೨೦

ಮುನಿಯುಬಳಿಯನು ಸಾರಲಾತನು |
ಘನಮಹಿಮ ಪರಮೇಶ ಪಾವನ |
ಜನುಮಯನೆನಿನ್ನಂಘ್ರಿಕಮಲದ ಬರವ ಹಾರೈಸಿ
ಇನಿತುದಿನಕಾದಿರ್ದೆನಿಂದೀ |
ಜನುಮ ಸಾರ್ಥಕವಾಯ್ತು ಬೊಮ್ಮನ |
ವಿನುತಲೋಕಕ್ಕತಿಥಿಯಾಗಿಹೆನಿಂದು ತಪದಿಂದ || ೨೧

ಎನ್ನನೊಯ್ಯಲ್ಕಲ್ಲಿಗಾ ಸಂ |
ಪನ್ನ ನಿಂದ್ರನು ನಿಂದು ಗಗನದೊ |
ಳೆನ್ನ ತಡವೇಕೇರು ನೀನಿಂದೀ ವಿಮಾನವನು |
ಎನ್ನುತೊಲವಿಂ ಕರೆಯುತಿರ್ದನು |
ನಿನ್ನ ಬರವನು ಕಂಡು ತಳುವಿದೆ |
ನಿನ್ನನುಜ್ಞೆಯ ನೀಯಬೇಕೆಂದೆನಲು ಮುನಿವರನು || ೨೨

ಮುನಿಪ ನಿನ್ನ ತಪಃಪ್ರಭಾವ ।
ಕ್ಕನುಗುಣದ ಫಲವೊಂದಿದ್ದೆ ನಿಜ ।
ಘನ ಮನೋರಥಸಿದ್ಧಿಯಾದುದು ನಿನಗೆ ಬಲುದಿನಕೆ ॥
ವಿನುತ ಲೋಕಕ್ಕಿಂದು ಪಯಣವ ।
ನನುಗೊಳಿಸು ನೀನೆಂದನುಜ್ಞೆಯ ।
ನಿನಕುಲೋದ್ಭವ ನೀಯಲಾ ಯಮಿವರನು ಮುದಪಡೆದು ॥೩॥

ದೇವಚಿತ್ರಸೋಡೆಯೇರುತ ।
ನೀವು ಮಂದಾಕಿನಿಯದಾಂಟುತ ।
ಪಾವನಾತ್ಮ ಸುತೀಕ್ಷ್ಣನಾಶ್ರಮಕೈದಲಾಮುನಿಯು ॥
ತಾವನೀಯುತ ನಿಮಗೆ ಒಹುಸಂ ।
ಭಾವನೆಯನೆಸಗುವನು ತನಗಿ ।
ನ್ನೀವುದಾಜ್ಞೆಯನೆನುತ ಬೆರೆದನು ಶ್ರೌತದಗ್ನಿಯಲಿ ॥೪॥

ಬಳಿಕ ಮಲ್ಲಿಯತಾಪಸರ್ಕಳು ।
ಕೆಲರು ವೈಖಾನಸರು ಮತ್ತಂ ।
ಕೆಲರು ಪೂರ್ವದವಾಲಖಿಲ್ಯರು ಕೆಲರೆಲೆಯುಣಿಗಳು ॥
ಹಲವು ಬಗೆಯಾವ್ರತಿಗಳೆಲ್ಲರು ।
ಬೆಳಗುವರೊ ದಿಕ್ತಟವನೆಂಬಂ ।
ತಲಘುತೇಜೋನ್ವಿತರು ಬಂದರು ಬಳಿಗೆರಾಘವನ ॥೫॥

ಬಡೆಯುನೆಂತಾವಜ್ರಿಯುಮರರಿ ।
ಗೊಡೆಯುನಹೆ ನೀನಂತುಮನುಜರಿ ।
ಗಡವಿನ್ರೊಕ್ಕಿಹೆ ತಾತನಾಜ್ಞೆಯ ಪಾಲಿಸಲ್ಕಿಂದು ॥
ಬಡಮುನಿಗಳಾದೆಮ್ಮ ಬಿನ್ನಪ ।
ಕೆಡೆಯುನೀಯುತ ನಿನ್ನಮನದಲಿ ।
ದೃಢತರೋನ್ನತಕೀರ್ತಿವಡೆಯ್ಯೆ ಮೂರುಲೋಕದಲಿ ॥ ೨೬ ॥

ತಂದೆ ತನ್ನಯ ಸುತರನೊಲಿದಾ ॥
ವಂದದಿಂ ಸಲಹುವನೊ ಆಪರಿ ।
ಯಿಂದ ರಾಜನು ಜನವ ಸಲಹುವುದಾತ್ಮಧರ್ಮವಲಾ ॥
ಇಂದುನಿನ್ನೀಪ್ರಜೆಗಳಾದೆವು ।
ಗೊಂದಿರುವ ಕಷ್ಟವನು ಪರಿಹರಿ ।
ಸೆಂದು ಬೇಡುವೆವದನು ಕರುಣಿಸಿ ಸಲಹು ಕರುಣಾಳು ॥ ೨೭ ॥

ಅರಸ ನಮ್ಮಯ ತಪಕೆ ರಕ್ಕಸ ।
ರಿರದೆ ವಿಘ್ನವನೆಸಗಿ ನಮ್ಮನು ।
ಮರುಕವಿಲ್ಲದೆ ಘಾತಿಸುತ ಬಲುಹಿಂಸೆಗೈದಪರು ॥
ಮರೆಯುಹೊಕ್ಕಿಹೆವಿಂದು ನಿನ್ನನು ।
ಶರಣಜನ ಸುರಕ್ಷಕನೆ ಖರೂ ।
ಳರನು ಸಂಹರಿಸುತ್ತ ರಕ್ಷಿಪುದೆಮ್ಮ ನೆನಲವರು ॥ ೨೮ ॥

ಮರುಗಿದನು ಮನದಲ್ಲಿ ಋಷಿಗಳ ।
ದರುಮಕೆಡರುಂಟಾಯ್ತು ಶಿವಶಿವ ।
ದುರುಳರಕ್ಕಸರುಬ್ಬಟೆಯ ನಿವರೆಂತು ಸೈಸುವರು ॥
ಬರವಸವನೀಯುತ್ತ ಭಯವನು ।
ಹರಿಸಬೇಕೆಂದೆನುತ ರಾಮನು ।
ಭರದೆ ಹೆದೆಯನು ಧನುವಿಗೇರಿಸುತೆಂದನವರೊಡನೆ ॥ ೧೯ ॥

ಬೆದರದಿರಿ ಮುನಿಗಳಿರ ನಿಮ್ಮ ।
ಭ್ಯುದಯಮುಂ ನಿಜಪಿತನವಮೂಲ್ಯದ ।
ವಿಧಿಯು ಮೆನ್ನನು ವನಕೆ ತಂದುದು ಮೇಣ್ಪ್ರಯೋಜನವು ॥
ಇದನು ಬಿಟ್ಟೆನಗಿಲ್ಲ ಪೆರತೊಂ ।
ದದಕೆ ಬಂದವನಲ್ಲ ಭೀತಿಯ ।
ನೆದೆಯೊಳನ್ನಿಡಸಲ್ಲ ನಂಬುವುದಿದನು ದಿಡವಾಗಿ ॥ ೨೦ ॥

ಇಂದು ಮೊದಲಾದುಷ್ಟರಾಕ್ಷಸ ।
ವೃಂದವನು ನೆರೆಕಡಿದು ಮುನಿಜನ ।
ಬಂಧುವೆನಿಸಿಕೊಪೆಸರ ನಾನುವೆ ನಿಮ್ಮ ತಪಗಳಿಗೆ ॥
ಕುಂದುಬಾರದತೆರದೆ ನೀಂ ಸ್ವ ।
ಚ್ಛಂದದಿಂದವುಗಳನು ಮಾಡುತ ।
ಸಿಂದಣಂದದೆ ಸುಖದೊಳಿಹುದಿನ್ನೆಂದನಾರಾಮ ॥ ೨೧ ॥

ಇಂತುಮುನಿಜನಕಭಯಮೀಯುತ ।
ಮುಂತೆನಡೆದು ಸುತೀಕ್ಷ್ಣಮುನಿಪನ ।
ನಂತ ಸತ್ಕಾರಗಳನೊಂದುತಲವನನುಜ್ಞೆಯಲಿ
ಚಿಂತೆಯಿಲ್ಲದೆ ರಾತ್ರಿಯನು ಬಲು ।
ಸಂತಸದೊಳಾಶ್ರಮದೆ ಕಳೆದ ।
ತ್ಯಂತವಿನಯದೆ ನಮಿಸುತವರಿಗೆ ಮಾರನೆಯದಿನದೆ ||೩೬||

ತೆರಳಲಾಜ್ಞೆಯನಾಂತು ಬಳಿಕ ।
ಲ್ಲಿರದೆ ಸಿಂಗಾಡಿಯನು ಭುಜದಲಿ ।
ಧರಿಸಿಮದಿಸಿದ ಗಜದವೊಲು ಮುಂಕೊಂಡು ನಡೆಯುತಿರೆ ।
ತರಳೆ ನೋಡಿದಳಾತ್ಮವಲ್ಲಭ ।
ನಿರವಮೆಲ್ಲನೆ ಸನಿಹಕೈದುತ ।
ಸರಸಭಾವದೊಳರುಹಿದಳು ಮನದರ್ಥವನು ಸೀತೆ ||೩೭||

ಚಿತ್ತವಲ್ಲಭ ಲಾಲಿಪುದು ಸತಿ ।
ಬಿತ್ತರಿಸುವೀನುಡಿಯ ನೊಲವಿಂ ।
ದುತ್ತಮೋತ್ತಮ ಧರ್ಮನಿಷ್ಠನು ನೀನು ಜಗವರಿಯೆ ॥
ಮತ್ತತನವೇನಿಲ್ಲ ಪರಸತಿ ।
ಯತ್ತ ಬಯಕೆಯದಿಲ್ಲವಾದೊಡ ।
ವೊತ್ತಿಕೊಂಡಿಹುದೊಂದು ಪರಪೀಡನೆಯಕಲ್ಮಷವು ||೩೮||

ತಾತನಾಣತಿವಿಡಿದು ಮುನಿಗಳ |
ರೀತಿಯಲಿ ವನದಲ್ಲಿ ಚರಿಸವಿ |
ನೀತನಂದದೆ ಶಸ್ತ್ರಧಾರಣವೇಕೆ ನಿನಗಿಲ್ಲಿ ||
ಭೂತಹಿಂಸಾಕ್ಷತ್ರ ಧರ್ಮದ |
ನೀತಿ ಸಲುವುದು ರಾಜ್ಯದೊಳಗಿರ |
ಲೀತಪಶ್ಚರ್ಯದೊಳು ಸಲುವುದೆ ಪೇಳು ಮತ್ಪತಿಯೆ ||೩೫||

ಎನ್ನಮನಕೀರೀತಿ ತೋರ್ಪುದು |
ಸನ್ನುತಾಂಗನೆ ನಿನ್ನ ಚಿತ್ತದೊ |
ಳೆನ್ನು ತೋರಿದಪರಿಯೊಳೆಸಗುವುದೆನುತ ಸತಿಯುಸಿರೆ ||
ತನ್ನ ಮನದೊಳು ಹಿಗ್ಗಿ ಗುಣಸಂ |
ಪನ್ನನಾರಾಘುವನು ಸತಿಯುರ |
ರನ್ನಕೆಂದನು ಲೋಕಕತಿಹಿತವಪ್ಪವಾಕ್ಯವನು ||೩೬||

ವಲ್ಲಭೆಯೆ ನಿನಗೊರೆವೆನಿದಕೇ |
ಳಲ್ಲಿ ಪಾರ್ಥಿವನಾಳ್ವನಾ ನೆಲ |
ದಲ್ಲಿ ತಾಂ ಪ್ರಜೆ ಮೊರೆಯನಿಡೆಯದನೊಲಿದು ರಕ್ಷಿಸಲು ||
ಬಿಲ್ಲುಕಣೆಗಳನ್ಮೈದೆ ತಳೆಯುತ |
ಖುಲ್ಲರುಪಟಳವನ್ನುತಗ್ಗಿಪ |
ದಲ್ಲದಿರ್ದೊಡೆ ನರಕಭಾಜನನಪ್ಪನಾನೃಪತಿ ||೩೭||

ಇಂದು ನಾವೀದಂಡಕಾವನ |
ಕೆಂದು ಬಂದೊಡೆ ಋಷಿಗಳೆಲ್ಲರು |
ಬಂದು ರಾಕ್ಷಸರಿಂದ ತಮ್ಮಯ ಯಾಗಗಳು ನೃಪನೆ ||
ಹೊಂದಿದುವು ದುರ್ದಶೆಯನವು ನಿ |
ನ್ನಿಂದಲುಳಿಯಲುಬೇಕು ದುಷ್ಟರ |
ಕೊಂದುನಮ್ಮನು ರಕ್ಷಿಸೆನಲಾಂ ಕೊಟ್ಟೆನಭಯವನು ||೩೮||

ಕಂದಮೂಲಫಲಾದಿಗಳ ತಾಂ |
ತಿಂದು ಜಪನಿಯಮೋಪವಾಸಗ |
ಳಿಂದ ಕಾಯಕ್ಲೇಶವಾನುತ ಘೋರತಪಗಳನು ||
ಚಂದದಿಂದಾಚರಿಪಮುನಿಜನ |
ವೃಂದವನು ನೆರೆ ಬಾಧಿಸುತ್ತಿಹ |
ಹಂದೆರಕ್ಕಸ ಮಂದೆಯನು ಸರಳಿಂದೆ ಸವರುವೆನು ||೩೯||

ನೀರೆನಿನಗೆನ್ನಲ್ಲಿನೇಹವು |
ಪಾರವೆಂಬುದು ನಿನ್ನ ನುಡಿಯಿಂ |
ತೋರುವುದು ಬೇರಲ್ಲನಡೆಯೆಂದಂದು ತೆರಳುತಲಿ ||
ಸಾರಿ ಋಷ್ಯಾಶ್ರಮಗಳನು ನಲ |
ವೇರಿಕಾಲವಕಳೆದು ಕೆಲವೆಡೆ |
ಮೂರುತಿಂಗಳು ಮತ್ತೆ ಕೆಲವೆಡೆಯಾರುತಿಂಗಳನೆ ||೪೦||

ಇಂತುನವವರ್ಷಗಳ ಕಳೆಯುತ ।
ಲಂತ್ಯದಲಿ ಹತ್ತನೆಯುವರ್ಷವ ।
ನಂತಮುನಿಸಂಸೇವ್ಯರೆನಿಸುವಗಸ್ತ್ಯಮುನಿವರರ ॥
ಪಿಂತಣದ್ಭುತಮಹಿಮೆಗಳನೆನೆ ।
ದಂತರಂಗದೆ ಪೊಗಳ ತೇಜೋ ।
ವಂತರಪ್ಪವರಾಶ್ರಮವ ಪುಗುತೆರಗಲವರಂದು ॥೪೧॥

ಕ್ಷೇಮವೇನ್ಯೆ ರಘುಜ ನಿನ್ನೀ ।
ಪ್ರೇಮಸೋದರನಿವನು ಕುಶಲಿಯೆ ।
ಭಾಮಿನೀಮಣಿ ಸುಖದಿನಿಹಳೇ ಜಾನಕೀದೇವಿ ॥
ನೀ ಮಹಾತ್ಮನು ನಿನ್ನ ದರ್ಶನ ।
ದಾ ಮಹಾಸುಖವೆನಗೆ ಲಭಿಸಿದು ।
ದೀ ಮಹಾಟವಿ ಪೂತವಾದುದು ನಿನ್ನ ಬರವಿನಲಿ ॥೪೨॥

ಬರುವೆ ನೀಂ ನಿನಗೀಯಬೇಕೆಂ ।
ದರಿಭಯಂಕರ ವಿಷ್ಣುಧರ್ಮವಿದ ।
ನುರುಶರಂಗಳು ಬತ್ತದಿಹ ಬತ್ತಳಿಕೆಯೊಡನಿರದೆ ॥
ಮೆರೆಯುವೀ ಖಡ್ಗವುಮನಿಂದಿನ ।
ವರೆಗವೋವಿದೆನಯ್ಯ ನೀಂ ಸ್ವೀ ।
ಕರಿಪುದಿವನೆಂದಿತ್ತು ಮಂತ್ರನ್ಯಾಸಪೂರ್ವಕದೆ ॥೪೩॥

ಧುರದೊಳದಿರಾದಸುರರಂಸುವನು ।
ಹುರಿದು ಮುಕ್ಕುವುವಲ್ಲದಿಲ್ಲವು ।
ಕೊರತೆಯಿವುಗಳೊಳವು ಪಿಶಾಚರ ಕುಲವಿನಾಶಿಗಳು ॥
ಹರಿಯು ಪೂರ್ವದೆ ರಕ್ಕಸರ ಸಂ ।
ಹರಿಸಿದನು ತಾನೀಧನುವಿನಿಂ ।
ಧರಿಸುತಿದ ನೀಂ ಸುಖವನೊಂದೆನುತಾಗ ಹರಸಿದನು ॥೪೪॥

ಮುನಿಪನಿತ್ತಾಧನುವು ಮೊದಲಾ ।
ದನಿತುಮಂ ಸ್ವೀಕರಿಸಿ ರಾಮನು ।
ತನಗೆ ವಾಸಕ್ಕೊಂದು ತಾವನು ಬೆಸಸಿ ನೀವೆನಲು ॥
ಮನದೆ ತಾಂ ಕ್ಷಣಮಾತ್ರ ಜಾನಿಸು ।
ತನುವಹುದು ನಿನಗೀ ಸಮೀಪದ ।
ಬನವು ನೀನಲ್ಲಿರ್ದೊಡಪ್ಪುದು ಸಕಲಸಂಪದವು ॥೪೫॥

ಅದನು ಕರೆವರು ಪಂಚವಟಿಯೆಂ ।
ದದರೊಳೊಣಗವು ಪುಷ್ಪಫಲಗಳು ।
ಸದಮಲವು ತತ್ಪುಣ್ಯದೇಶವು ಸೌಖ್ಯದಾಯಕವು ॥
ಪದುಮನೇತ್ರನೆ ನಿನ್ನ ಹೃದಯದ ।
ಹದನ ಬಲ್ಲೆನು ತಾವು ನಿನಗದು ।
ಮುದವನೀವುದು ಪರ್ಣಶಾಲೆಯ ರಚಿಸು ನೀನಲ್ಲಿ ॥೪೬॥

ಎಂದು ನುಡಿಯುವಗಸ್ತ್ಯಮುನಿಪಗೆ ।
ವಂದನೆಯ ಗೈದವನನುಜ್ಞೆಯ ।
ನೊಂದಿ ಸೀತಾಲಕ್ಷ್ಮಣರನೊಡಗೂಡಿ ರಾಘವನು ॥
ಮುಂದೆ ಪೋಗುತ ಮಧ್ಯಮಾರ್ಗದೊ ।
ಳೊಂದು ವಟವೃಕ್ಷದೊಳು ಮೇಘಃ ।
ಸ್ಕಂಧದಂದದಿಸಿರ್ದ ಗೃಧ್ರನ ಕಂಡು ಬೆಸಗೊಂಡ ॥ ೪೭ ॥

ಎಲವೊ ನೀನಾರಾವುದೈ ನಿಜ ।
ಕುಲವು ಪೆಸರೇನೆನ್ನೊಳೊರೆಯೆನ ।
ಲಲಘುಮತಿ ಕೇಳಾಂ ಜಟಾಯುವು ಸಖನು ತವಪಿತಗೆ ॥
ಕುಲವ ಪೇಳುವೊಡರುಣಪುತ್ರನು ।
ಬಲಯುತನು ಸಂಪಾತಿಯೆಂಬವ ।
ನಿಳೆಯೊಳಗ್ರಜನೆನಗೆ ನಿನಗಿನ್ನಾಂ ಸಹಾಯಕನು ॥ ೪೮ ॥

ನಿನ್ನ ಬಳಿಯೊಳಗಿಹೆನು ಗುಣಸಂ ।
ಪನ್ನ ಲಕ್ಷ್ಮಣನೊಡನೆ ನೀನಿರ ।
ದನ್ಯಕಾರ್ಯಕೆ ತೆರಳೆ ರಕ್ಷಿಸುತಿಹೆನು ಜಾನಕಿಯ ॥
ಮನ್ನಿಪುದು ನೀನೆಂದ ಪಕ್ಷಿಯ ।
ಮನ್ನಣೆಯಿನಾದರಿಸುತೆರಗು ।
ತ್ತನ್ನನೇ ನೀನೆನಗೆ ಬಾಂಧವನೆಂದನಾರಾಮ ॥ ೪೯ ॥

ಪೇಳುತೀಪರಿ ಪಂಚವಟಿಯು ವಿ ।
ಶಾಲಸುಕ್ಷೇತ್ರವನು ಸಾರ್ದನು ।
ಕೂಲವಾದೀಯೆಡೆಯು ನೋಡ್ಡೈ ತಮ್ಮ ನಾವಿಲ್ಲಿ ॥
ಕಾಲವನು ಕಳೆಯಲ್ಕೆ ತಳರಿನ ।
ಶಾಲೆಯೊಂದನು ರಚಿಸು ನೀನೆನ ।
ಲಾಲಯುವ ಧಿಕ್ಕರಿಸುವಾಶ್ರಮವೊಂದನೆಸಗಿದನು ॥೫೦॥

ನೋಡಿದನು ರಾಘವನು ಲಕ್ಷ್ಮಣ ।
ಮಾಡಿದಾವರಪರ್ಣಶಾಲೆಯ ।
ನಾಡಿಗಚ್ಚರಿ ತಮ್ಮ ನಿನ್ನಯ ಬುದ್ಧಿಕುಶಲತೆಯು ॥
ನೀಡುವೊಡೆ ನಿನಗುಡುಗೆರೆಯನೀ ।
ಕಾಡಿನೊಳು ದುರ್ಲಭವು ಪಡಿಯಿದು ।
ಗಾಢತರದಾಲಿಂಗನವು ಕೊಳ್ಳೆನುತ ಬಿಗಿದಪ್ಪಿ ॥೫೧॥

ಲೋಲಲೋಚನೆಯೊಡನೆ ಮಿಂದು ವಿ ।
ಶಾಲಗೋದಾವರಿಯೊಳಮಲದು ।
ಕಾಲಗಳ ಧರಿಸುತ್ತ ಸಂಧ್ಯಾದಿಗಳ ನಿರದೆಸಗಿ ॥
ಮೇಲೆನಿಪ ಸುಮುಹೂರ್ತದಲಿ ಬಲ ।
ಶಾಲಿ ಲಕ್ಷ್ಮಣನೊಡನೆ ನೂತನ ।
ಶಾಲೆಯನು ಸಂಭ್ರಮದೆ ಪೊಕ್ಕನು ದಾನವಧ್ವಂಸಿ ॥೫೨॥

ಮೊದಲನೆಯ ಸಂಧಿ ಸಂಪೂರ್ಣಂ.

ಎರಡನೆಯ ಸಂಧಿ.

ಸೂಚನೆ|| ಭೋಗದಾಸೆಯ ಶೂರ್ಪಣಖೆಯನು |
ಮೂಗನರಿದಟ್ಟಲ್ಕೆ ಲಕ್ಷ್ಮಣ |
ನಾಗರಾಮನ ಕೆಣಕಿಯಳಿದರು ಖರಮುಖಾಸುರರು ||

ನೂಕುತಿರ್ದರು ದಿನಗಳನು ನಿ |
ರ್ವ್ಯಾಕುಲರು ತಾವಲ್ಲಿ ಮೂವರು |
ಮೇಕವಮಾನಸರಾಗಿ ಮರೆದಾವಿಪಿನದಾಯಸವ |
ಸಾಕು ಸಾಕಾತಪದ ತಾಪವು |
ನೂಕದೆಮ್ಮಿಂದೆಂಬ ಜನದವಿ |
ವೇಕಕುರೆಬೇಸತ್ತನೆನೆ ರವಿದಕ್ಷಿಣಕೆ ಸರಿದ ||೧||

ಸಂದುಸಿಕ್ಕಿತು ತನಗದೆನ್ನುತ |
ಬಂದನಾಹೇಮಂತಭೂಪನು |
ಮಂದಿಯನು ಚಳಿಯೆಂಬ ಸಂಕಲೆಯಿಂದ ಬಂಧಿಸುತೆ ||
ಅಂದಗೆಡಿಸುವ ಮಂಜೆನಸ್ತ್ರಗ |
ಳಿಂದಲಿರಿಯಲು ಸಹಿಸಲಾರದೆ |
ನೊಂದು ಬಯಸಿತು ಮಂದಿ ದಿನಮಣಿಗುತ್ತರಾಯಣವ ||೨||

ನೀರನೆಳಸದು ಜನವು ಪೂವಿನ ।
ಹಾರವಾನದು ಮೀಯದಲೆ ಕಾ ।
ಸಾರಗಳೊಳುರೆ ಕಾಯಲಿಚ್ಛೈಸಿದುದು ವಹ್ನಿಯನು ॥
ವಾರಿಜಂಗಳ ದಳಗಳುದಿರಿದು ।
ವಾರಿಪೋದುವು ರವಿಯಕಿರಣಗ ।
ಳಾರಯಿಸಿದುವು ಸಕಲಜಂತುಗಳುಷ್ಣವಸ್ತುಗಳ ॥೩॥

ಈ ತೆರದಹಿಮಕಾಲದೊಳಗನು ।
ಜಾತಸೀತೆಯರೊಡನೆ ರಾಘವ ।
ನಾತಪೋಜನಯೋಗ್ಯವಾಗಿಹ ಪರ್ಣಮಂದಿರದೆ ॥
ಶೀತಭಯದಿಂ ಹರಿಣದಜಿನವ ।
ನಾತುಮೈಸೊಗಸಿಂದ ಮೆರೆಯುತ ।
ವೀತಿಹೋತ್ರನ ದಿವ್ಯತೇಜವನಿಳಕೆಗೈಯುತಿರೆ ॥೪॥

ಬಂದಳವರೆಡೆಗಾಗಿ ರಾಕ್ಷಸ ।
ವೃಂದದೇಳಿಗೆಗಶುಭದಾಯಿಕೆ ।
ಮಂದಮತಿಗಳಿಗಗ್ರನಾಯಿಕೆ ಕುಮುಖಿ ಶೂರ್ಪಣಖಿ ॥
ನಿಂದು ನೋಡಿದಳಮಲರಾಘವ ।
ನಂದಚಂದವ ಕಾಮಶರಹತಿ ।
ಗಂದು ಮೈಗೊಟ್ಟೆರಗಿನುಡಿಸಿದಳಾ ದೃಢವ್ರತನ ॥೫॥

ಆರು ನೀನೆಲೊವೀರ ನಿನಗೀ ।
ನಾರಿಯೇನಹಳಾತನಾವನ ।
ಪಾರಪೌರುಷನಂತಿಹನು ನಿಮಗಿಲ್ಲಿ ಬರವೇನು ॥
ಶೂರರಹರಕ್ಕರರು ಚರಿಸುವ ।
ಘೋರಕಾನನವೆಂಬುದರಿಯದೆ ।
ವಿಾರಿ ನಡೆವುದಕೇನುಕಾರಣವೆಂದಳಾದನುಜೆ ॥೬॥

ನೋಡಿದನು ರಾಘುವನು ವಿಗೆ ಮಾ ।
ತಾಡಿದನು ಕೇಳಬಲೆ ಲೋಕದೆ ।
ರೂಢವಾಗಿಹಸೂರ್ಯವಂಶದ ದಶರಥೋರ್ವಿಪನಾ ॥
ಗಾಢಮೋಹದ ಪುತ್ರರಾವೀ ।
ಗಾಡಿಕಾತಿ ಮದೀಯಸುದತಿಯು ।
ಕಾಡಿಗಾಪಿತೃವಾಕ್ಯಪಾಲನೆಗಾಗಿ ಬರವಾಯ್ತು ॥೭॥

ಕರೆವರೆನ್ನನು ರಾಮನೆನುತಲಿ ।
ಮೆರೆವಲಕ್ಷ್ಮಣನಾಮವೀತಗೆ ।
ಕಿರಿಯನಿವನೆನ್ನಿಂದ ಸೀತಾಹ್ವಯಳು ತಾನಿವಳು ॥
ಅರಿಯಲಗ್ಗದಜನಕ ಚಕ್ರೀ ।
ಶ್ವರನ ಕುವರಿಯು ತನ್ನಭಾಗ್ಯದ ।
ಸಿರಿಯು ನೀಸಾರೇತಕ್ಕೈದಿದೆ ಪೇಳು ನಿಶ್ಚಯವ ॥೮॥

ಸರಸಮಾದಾನುಡಿಯನಾಲಿಸಿ ।
ಹರಿಸಗಡಲೊಳ್ಮುಳುಗುತಸುರಿಯು ।
ಮೆರೆವಲಂಕಾಧೀಶರಾವಣನನುಜೆ ತಾನಹೆನು ॥
ಧರೆಯೊಳೆನ್ನನು ಶೂರ್ಪಣಖಿಯೆಂ ।
ದೊರೆವರೀಯಭಿಧಾನವನು ಕೇ ।
ಳ್ದರಿಯೆವೆಂಬಾಜನವು ದುರ್ಲಭವಲ್ತೆಲೋಕದಲಿ ॥೯॥

ರಂಭೆಯೂರ್ವಶಿಯರ್ಕಳೆನ್ನನಿ ।
ತಂಬಬಿಂಬಕೆ ಸಾಟಿಯೇ ಮೇ ।
ಣಂಬುಜೋದ್ಭವನರಸಿ ಸರಸತಿ ತನಗೆ ಸರಿಯಹಳೇ ॥
ಎಂಬೊಡತಿಶಯವಲ್ಲ ಕೇಳಲ ।
ರಂಬನಾಸತಿಗಿತಿಯರೆನ್ನೀ ।
ಕುಂಭಕುಚಕೇನೆಣೆಯೆ ತೆಗೆ ತನ್ನುಂಗುಟಕೆ ಸರಿಯೇ ॥೧೦॥

ಮಾರಿದೆನು ದೇಹವನಿದನು ನಿನ ।
ಗಾರದರ್ಶನಫಲವೊ ಕಾಣೆನು ।
ಸಾರವಹಸಂಸಾರವೊದವಿದುದಿಂದು ಪ್ರಣ್ಯವಲಾ ॥
ಧೀರರೆನಿಬರೊ ರಾಕ್ಷಸೇಂದ್ರರ ।
ಪಾರಸಾಹಸದೋರಿಬೇಡದ ।
ರಾರಿಗೊಲಿಯದ ಚಲುವೆ ನಿನಗಾನೀಗಳೊಲಿದೆನಲಾ ॥೧೧॥

ಬರುವಕಾಲದೆ ಪುಣ್ಯವಾರಿಗು ।
ವೊರೆಯುದೈದುವುದೆಂಬನಾಳ್ನುಡಿ ।
ಯರಿಯಲೀಗಳು ಸಫಲವಾದುದು ನಿನ್ನವಿಷಯದಲಿ ॥
ಅರಸ ನೀನಿನ್ನೇಳು ಮನುಮತ ।
ನೊರಸೊರಸು ಘನವಾಯ್ತು ತನ್ನನು ।
ವರಿಸು ಬಾರೆಂದೆನಲು ನಸುನಗುತೆಂದನಾರಾಮ ॥೧೨॥

ಸುರರ ಲೆಕ್ಕಿಸದಿರ್ಪದಾನವ ।
ರರಸನಿಗೆ ಮಾನಾಪಹರಣವ ।
ನಿರದೆ ಬಯಸುವುದಸುರಿ ಕೇಳ್ನಿನಗಿಂದು ತರವಲ್ಲ ॥
ಧರಣಿಯೊಳು ನೀಂ ಗೈದದೋಷವ ।
ನೊರಗಿಪುದು ಜನವಾತನಲಿ ದನು ।
ಜರಿಗಕೀರ್ತಿಯನೀವಮಾರ್ಗಕೆ ಮನವನೀಯದಿರು ॥೧೩॥

ಜಾಣೆಕೇಳಿಂದೆನ್ನ ನಿಯಮವ ।
ಬಾಣವೊಂದೇವಾಣಿಯೊಂದೇ ।
ಪ್ರಾಣಪದಕವ ಪೋಲ್ವಪತ್ನಿಯುವೊರ್ವಳೇ ತನಗೆ ॥
ಮಾಣು ನಿನ್ನಭಿಲಾಷೆಯನು ಶಿವ ।
ನಾಣೆ ನಾನಿದ ತಪ್ಪಿ ನಡೆಯೆನು ।
ಕೇಣಗೊಳ್ಳದೆ ತೆರಳು ನೀನಿನ್ನೆಂದು ನೃಪನೊರೆದ ॥೧೪॥

ಗಾಯುವನು ತೋರಲ್ಕೆವೈದ್ಯನು ।
ಮಾಯಿಸುವ ಮದ್ದೀಯದಿರ್ಪನೆ ।
ಕಾಯಬಲಪುಷ್ಟಿಯನು ಪಡೆದಿಹನಿನ್ನವಂದಿಗರು ॥
ಕಾಯಜಾತನ ತಾಪಕೌಷಧ ।
ವೀಯಬೇಕೆಂದಬಲೆಯಾಚಿಸ ।
ಲೀಯದಿರ್ಪುದು ಮತವೆ ಸುಡು ನಿನ್ನನುಜಿತವ್ರತವ ॥೧೫॥

ಎನುತೆ ದುರುಳೆಯು ಹಲುಬುತಿರಲಾ ।
ಮನುಕುಲೇಶನು ಕೇಳಿ ಸೀತೆಯ ।
ಮನದ ಬೇಸರನೊರಸಬೇಕೆಂದಂದು ಮನದಂದು ॥
ದನುಜೆ ತನಗೀಕಾರ್ಯ ಸಲುವುದೆ ।
ವನಿತೆ ಜತೆಯೊಳಗಿಹಳು ನೀನೆ ।
ನ್ನನುಜನನು ವರಿಸೆಂದು ತಾನೇಕಾಂಗಿಯಾಗಿಹನು ॥೧೬॥

ಭೇದವೇನನುಜನೊಳು ನಿನಗದು ।
ಸಾಧುವೆಂದೆನಲವಳು ಕಾಮನ ।
ಬಾಧೆಗಾರದೆ ಪೋಗಿ ಯಾಚಿಸಲದಕೆ ಸೌಮಿತ್ರಿ ॥
ಸಾಧುಮಾರ್ಗದೆ ಬೊಮ್ಮಚರಿಯುವ ।
ಸಾಧಿಸುತ್ತಿಹೆನವಧಿಯನ್ನೆಗ ।
ಮಿಾದುರಾಗತವಾಗದೆನ್ನೊಳು ಸಾಗು ನೀನೆನಲು ॥೧೭॥

ಕೋಪವುಕ್ಕಿದುದೊಡನೆ ಮನ್ಮಥ ।
ತಾಪ ಸುಕ್ಕಿದುದೆನ್ನನೀಪರಿ ।
ಪಾಪಿಗಳು ಪರಿಹಾಸಗೆಯ್ವವೊಲಾಯ್ತಲಾ ಎನುತ ॥
ಓಪಳೆರ್ದಪಳೆಂಬಗರ್ವವೊ ।
ಭೂಪುಭೂಪೆಲೊ ಹಂದೆರಾಮನೆ ।
ಯಾಪಿನಾಕಿಯುಕರೆಯುತುಳುಹಾ ನಿನ್ನವಲ್ಲಭೆಯ ॥೧೮॥

ಅರಿಚುತೀಪರಿ ಕುಪ್ಪಳಿಸಿ ಮುಂ ।
ಬರಿದು ಸೀತೆಯಮೇಲೆ ರಭಸದಿ ।
ನೆರಗಲೈತಹದುಷ್ಟೆಯನು ಕೈಯಿಂದಲಡಗಟ್ಟಿ ॥
ಅರಸ ಸೂಚಿಸಲೊಡನೆ ಲಕ್ಷ್ಮಣ ।
ನಿರದೆ ಸೆಳೆಂ ಮೂಗುಕಿವಿಗಳ ।
ನರಿಯೆ ಹಾಹಾರವದೆ ಹಾಯ್ದಳು ಬಂದಪಥವಿಡಿದು ॥೧೯॥

ಸದೆದು ಸುಜನರನಾಜನಸ್ಥಾ ।
ನದಲಿ ಬಹುಬಲದೊಡನೆ ರಾಜಿಪ ।
ಮದಮುಖರ ಖರದೂಷಣರ ತನ್ನನುಜರೆಡೆಗಿರದೆ ॥
ಬೆದರುತೊದರುತ ಮುಖದೆ ಪರಿವಾ ।
ರುಧಿರಮಂ ತಾನುಟ್ಟಸೀರೆಯೊ ।
ಳದಿಮುತರಿಚುತ ಬಂದು ಬಿದ್ದಳು ಕಾವುದೆಂದೆನುತ ॥೨೦॥

ನೋಡಿದನು ಖರನಾತ್ಮಸೋದರಿ ।
ಗಾಡಬಾರದಭಂಗವೊದವಿತೆ ।
ದಾಡೆಯುಲುಗಿದನೀಚನಾವನುಕಾಲಭೈರವನ ॥
ಆಡು ವನಿತಾಮಣಿಯೆ ನಿನಗೀ ।
ಕೇಡದಾರಿಂದಾಯ್ತು ಪಾಪಿಯು ।
ಬಾಡನಾರೋಗಣೆಗೆ ಬಡಿಸುತ ನಿನ್ನ ತಣಿಸುವೆನು ॥ ೨೧ ॥

ಸುರರು ಯಕ್ಷರು ಕಿನ್ನರರು ನ ।
ಮ್ಮೊರೆಗೆ ಬರ್ಪರೆ ಸಾಲರಾಹುಲು ।
ನರರ ಮಾತಂತಿರಲಿ ಗಣನೆಯೊಳಿಲ್ಲ ನಮಗವರು ॥
ಹರಿಹರಬ್ರಹ್ಮಾದಿಗಳು ನ ।
ಮ್ಮರಮನೆಯ ಕಾದಿಹರು ಶಿವಶಿವ ।
ಪಿರಿಯ ಸೋಜಿಗವಲ್ತೆ ನಿನ್ನಯವಿಕೃತರೂಪವಿದು ॥ ೨೨ ॥

ಎಂದು ನುಡಿವಾದನುಜಪತಿಯೊಡ ।
ನೆಂದಳಿಂತಾಶೂರ್ಪಣಖಿ ಕೇ ।
ಳ್ಬಂದಿಹರು ಬನಕಿಂದಯೋಧ್ಯಾಧಿಪನ ದಶರಥನ ।
ನಂದನರ್ಕಳು ರಾಮಲಕ್ಷ್ಮಣ ।
ರೆಂದು ನಾಮವವರ್ಗೆ ರಾಮಂ ।
ಗಿಂದುನಿಭಮುಖಿ ಸೀತೆಯೆಂಬಳು ಪತ್ನಿಯಾಗಿಹಳು ॥ ೨೩ ॥

ರೂಪಿನಲಿ ಮನುಮತನನದಟನೊ ।
ಳಾಪಿನಾಕಿಯು ಸೋಲಿಪರು ವರ ।
ಚಾಪಹಸ್ತರು ಕೋಮಲಾಂಗರು ಮೇಣ್ ಸಹೋದರರು ॥
ತಾಪಸರವೋಲ್ವಾರುಡೆಯನಾಂ ।
ತಾಫಲಂಗಳ ಮೆಲುವರೆಂತುಂ ।
ಚಾಪಲಂಗಳಗೆದೆಯನೀಯರು ಧೀರಮಾನಸರು ॥೨೪॥

ಆತಳೋದರಿ ಸೀತೆ ಭುವನ।
ಖ್ಯಾತೆ ಸುಗುಣೋಪೇತೆ ಸಜ್ಜನ ।
ಗೀತೆ ದೋಷಾತೀತೆ ಸತ್ಕುಲಜಾತೆ ಸುವಿನೀತೆ ॥
ಆತರುಣಿಯನು ನಿನಗೆ ತರಲೆಂ ।
ದಾತುರದಿನಾನೈದಲೆನಗಾ ।
ಪಾತಕಿಯು ಲಕ್ಷ್ಮಣನು ತತ್ಕ್ಷಣವೀವಿಲಕ್ಷ್ಮ ॥೨೫॥

ಗೈದನೆನುತಳುತಿರ್ಪತಂಗಿಯ ।
ನಾದರಿಸಿ ಖರನಿರದೆ ಬಲವನು ।
ಮೋದದಿಂ ಸಂವರಿಸಿ ಪೊಕ್ಕನು ಪಂಚವಟಿಯನ್ನು ॥
ಆದುದದ್ಭುತರಭಸ ಭೇರೀ ।
ನಾದ ಕಿವುಡೇಳಿಸಿತು ಜಗವನು ।
ಹೋದಕಿವಿಮೂಗುಗಳದನುಜೆಯ ಕಡೆಯುದಂಡೆನುತ ॥೨೬॥

ಅರಿದು ರಾಮನು ಲಕ್ಷ್ಮಣನೆ ನೀಂ ।
ಧರಣಿಜೆಯನೆಚ್ಚರದೆ ಕಾದಿರು ।
ತರಿವೆನಾನೀದುರುಳರನು ಬಿಡದೆನುತ ಬಿಲುಗೊಂಡು ॥
ಅರಗಳೇ ನೀವೆಮಗೆ ಕಾರಣ ।
ವರಿಯಬಾರದು ತನಗೆ ತವಸಿಗ ।
ಳರವನಾಂತೆವೆಮ್ಮೊಳಗೆ ವೈರವದೆಂತು ನಿಮಗಾಯ್ತು ॥೭೩॥

ದುರುಳೆಯೊರ್ವಳು ನಮ್ಮ ತರುಣಿಯ ।
ನಿರಪರಾಧೆಯ ಭಕ್ಷಿಸುವೆನೆಂ ।
ದೆರಗಲಬಲೆಯ ಕೊಲುವುದನುಚಿತವೆಂದು ನಾವರಿಗು ॥
ಕೊರೆದೆವೈ ಕಿವಿಮೂಗುಗಳ ನೀ ।
ಧುರಕೆ ನೀವಿಂದೇತಕೈದಿದಿ ।
ರೊರೆವುದೆಮ್ಮಪರಾಧವೇನೆಂಬುದನು ನೀವೀಗ ॥೭೮॥

ದಂಡಕಾವನತಾಪಸರು ನಿ ।
ಮ್ಮಂಡಲೆಯ ಸೈರಿಸದೆ ತನ್ನನು ।
ಕಂಡು ಕೇಳಿದರಿತ್ತನಭಯವನಾಮಹಾಜನಕೆ ॥
ಪುಂಡನೆನಿಪಸುರರನು ಮತ್ತೀಗ ।
ದಂಡಕಾಹುತಿಯೀವೆನೆನುತಲಿ ।
ಕಂಡು ನಿಮ್ಮಾದಂಡಿಯನು ಹುರಿಗೊಳಿಸಿತಾವಚನ ॥೭೯॥

ಹೆಂಡಿರಾಸೆಯು ಮಕ್ಕಳಾಸೆಯು ।
ಕಂಡುಕೇಳಿದರಾಸೆ ನಿಮಗಿರೆ ।
ಖಂಡೆಯುದಮೇಲಾಣೆಯಿಡುವುದು ಸಜ್ಜನರ್ಕಳನು ॥
ಕಂಡೊಡೀದಿನಮೊದಲು ನಿಮ್ಮಯ ।
ಮುಂಡೆಗಳ ಬಾಗಿಸುತ ದೂರದೆ ।
ಕೆಂಡವನು ಕಂಡಂತೆ ಜಾರುವೆವೆಂದು ನೀವೀಗ ॥೨೦॥

ಅಲ್ಲದಿರ್ದೊಡೆ ನಿಮ್ಮನೀಗಳೆ ।
ಹುಲ್ಲಮೆದೆಯನು ಕಿಚ್ಚುಸುಡುವಂ ।
ತಿಲ್ಲೆ ನಿರ್ನಾಮರನು ಗೆಯ್ದಪೆನೆನಲು ರಾಘವನು ॥
ಕಲ್ಲಿನೊಳು ಮಳೆಗರೆದೊಡೇನದು ।
ಮೆಲ್ಲಿತಹುದೇ ರಾಮವಾಕ್ಯದ ।
ಬಲ್ಲವಿಕೆಯನು ಖುಲ್ಲರರಿವರೆ ಹಾಯ್ದರೊಗ್ಗಡಿಸಿ ॥೨೧॥

ದಾನವರು ಪದಿನಾಲ್ಕುಸಾವಿರ ।
ಮಾನುಮಾಬಗೆಯೆಂತು ರಾಮನು ।
ತಾನದೊರ್ವನೆ ನಿಂತು ಕಲಕುವುದೆಂತು ಪಗೆಗಡಲ ॥
ಏನಗೈದಪನೆಂತು ಸೆಣಸುವ ।
ನೀನಿದಾನವ ನೋಳ್ಪೆವೆನ್ನುತ ।
ಲಾನಭೋಂಗಣದೊಳಗೆ ನೆರೆದರು ಶಕ್ರಮುಖಸುರರು ॥೨೨॥

ಧರೆಯು ಜನಕಿತ್ತಧಿಕಬಾಧೆಯ ।
ಸುರರ ಸಂಕಟಗೊಳಿಸಿ ಧರ್ಮವ ।
ಸರಕುಗೆಯ್ಯದೆ ಮೀರಿ ಸಲೆ ದುರ್ಮಾರ್ಗಪರರಾಗಿ ॥
ನರಕಭೀತಿಯು ತೃಣಕೆ ಸಮವೆಂ ।
ದರಿತು ನಡೆಯುವ ದುರುಳರಕ್ಕಸ ।
ಗುರಿಗಳೇ ನಿಮ್ಮಾಯು ಪೂರ್ತಿಯನೊಂದಿತಿಂದಿನಲಿ ॥ ೩೩ ॥

ಎಂದು ಸರಳುಗಳಿಂದ ಸುಭಟರ ।
ವೃಂದವೃಂದಗಳನ್ನು ಸದೆದಾ ।
ಸ್ಯಂದನಂಗಳಕೂಡೆ ರಥಿಕರನಂದು ತರಿಯುತ್ತ ॥
ಮುಂದೆ ಬಹಮದದಾನೆಗಳ ಬಲು ।
ಸಂದಣಿಯನುರುಳಿಸುತಲಶ್ವಗ ।
ಳೊಂದುಮಿಲ್ಲೆನೆ ಸವರಿ ಹುಡಿಗುಟ್ಟಿದನು ರಾಘವನು ॥ ೩೪ ॥

ದಿಟ್ಟರವರೊಳ್ಕೆಲರು ಸಮರದ ।
ಜಟ್ಟಿಗಳು ಮುಂದೈದಿ ರಾಮನ ।
ಗಟ್ಟಿಸಿದರಾಪರಿಘತೋಮರಕುಂತಖಡ್ಗದಲಿ ॥
ಪೆಟ್ಟು ತಾಗಿತು ರೋಷವೇರಿತು ।
ಹುಟ್ಟುಗುಟ್ಟುವೆನಿವರನೆನುತಲಿ ।
ತೊಟ್ಟು ಗಾಂಧರ್ವಾಸ್ತ್ರವನು ಬಿಡದೆಚ್ಚನಾಭೂಪ ॥ ೩೫ ॥

ಕಕ್ಕಿದರು ನೆತ್ತರನು ಕೆಲಬರು ।
ಸೊಕ್ಕುಮಲಗಿದರಂದನೇಕರು ।
ಮಿಕ್ಕವರು ಬೆಕ್ಕಸವನಾಂತೋಡಿದರುಳಿದು ಕಳನ ॥
ತಿಕ್ಕಿಮುಕ್ಕಿತು ಸರಳು ಸಕಲರ ।
ನಕ್ಕಜವು ತಾನೆನುತ ದೂಷಣ ।
ನುಕ್ಕುಗಾರನು ಪೊಕ್ಕನಾಹವಕಂದು ಸಮತಳಿಸಿ ॥೨೬॥

ಸಿಡಿಲಿಗೆಣೆಯುಹಸರಳ ಪೂಡುತ ।
ತಡೆದುಕೊಳ್ಳೆಂದೆಸೆಯುಲದನಿ ।
ಕ್ಕಡಿಯುಗೈಯುತ ರಾಮನಾತನ ಬಿಲ್ಲನೊಂದರಲಿ ॥
ಕಡಿದು ನಾಲ್ಕಂಬಿನಲಿ ಕುದುರೆಗ
ಳೊಡಲನಿರದೆಚ್ಚೊಂದುಶರದಲಿ ।
ಕೆಡಹಿ ಸೂತನ ಮೂರುಬಾಣದಿ ದೂಷಣನನೆಚ್ಚ ॥೨೭॥

ಉರವಣಿಸಿ ಕೈಯೊಡನೆ ಖಳತಾ ।
ನುರುಬಿದನು ತರುಬಿದನು ಪರಿಘದೊ ।
ಳೆರಗಿದನು ಹಗೆಹರಿದುದೀದಿನವೆನುತ ಬೊಬ್ಬಿರಿದು ।
ಸರಳ ಸುರಿದನು ರಾಮನೊಡನೆಯೆ ।
ತರಿದನಾತನ ಭುಜಗಳೆರಡನು ।
ಪರಣದೊಡಲನು ಬಿಡಲು ಬಿದ್ದನು ಗಿರಿವೊಲಾಖಳನು ॥೨೮॥

ಆಸಮಯದೊಳಗಂತರಿಕ್ಷದೆ ।
ವಾಸವನು ಮೊದಲಾದಸುರರು ।
ದ್ಭಾಸಿಸುವುಗಳ ಚೆಲ್ಲಿದರು ರಾಘವನ ಸಿರಿಮುಡಿಗೆ ॥
ಈಸುವನು ನೋಡಿದನು ಮನದಲಿ ।
ಗಾಸಿಯಾಂತನು ತಮ್ಮನಳಿವಿಂ ।
ಗೈಸಲೇಎನುತೆದ್ದುಕೊಂಡನು ಧನುವನನಾಚರನು ॥೩೯॥

ತಾಳುತಾಳ್ಳೈ ದೇವ ನಿನಗೀ ।
ಹಾಲುಹಸುಳೆಯು ಸಮನೆ ತನಗಿಂ ।
ದೂಳಗವ ಕೊಡು ನಿನ್ನಸೇನಾನಾಥನಾನಲ್ತೆ ॥
ಜಾಲಗೈಯದೆ ಕೊಲುವೆನೆನ್ನುತ ।
ಶೂಲವೊಂದರಿನಿಡಲು ತ್ರಿಶಿರನು ।
ಕೋಲುಗಳನಿರದದನೆ ಖಂಡಿಸುತಾಕಕುತ್ಸ್ಥಜನು ॥೪೦॥

ಬಡನೆ ಕವಲಂಬುಗಳ ಜೋಡಿಸಿ ।
ಬಿಡದೆ ತಲೆಗಳ ಮೂರಸಿಳುಹ ।
ಲ್ಕಡರಿ ನಭದೊಳ್ಕುಣಿದುಬಿದ್ದುವು ಖರನ ಸಮ್ಮುಖಕೆ ॥
ಕೆಡೆದತಲೆಗಳ ಕಂಡು ಕೋಪದೆ ।
ತಡೆಯದೆದ್ದನು ಕಾರ್ಮುಕವ ಜೇ ।
ವಡೆದು ರಾಮನಸಮ್ಮುಂದೆ ಸುಳಿಸಿದನಮರರಿಪು ರಥವ ॥೪೧॥

ಎಲೆಲೊ ರಾಘುವ ನಿನ್ನ ಭುಜಬಲ ।
ದಳವನರಿಯದೆ ನಮ್ಮ ಕೆಣಕಿದೆ ।
ಕೆಲರಹುಲುರಕ್ಕಸರ ಕೊಂದಿಹ ಗರುವಗರಹೊಡೆದು ॥
ಸಲೆ ಪರಾಕ್ರಮಿಯೆನುತ ಬೆರೆತಿಹೆ ।
ನಿಲಿಸು ನಿನ್ನೀಕೊಬ್ಬನೀಗಳೆ ।
ಕಳುಹುವೆನು ಯಮಪುರಕೆ ನಿಲ್ಲೆಂದೊದರಿದನು ಖರನು ॥೪೨॥

ಆದುದಾಯಿತು ನೀನಳಿಯೆ ತವ ।
ಸೋದರಿಗೆ ಕಿವಿಮೂಗು ಬರ್ಪುವೆ ।
ಈದುರಾಗ್ರಹವೇಕೆ ನಿನ್ನೊಡನಿರ್ದಭಟರೆಲ್ಲ ॥
ಹೋದರಿದರಿಂದೆಂದು ಬಗೆಯುತೆ ।
ಕಾದುವಾಸೆಯನುಳಿದು ಬದುಕುವ ।
ಹಾದಿಯರಸುವುದೊಳ್ಳಿತೆಂದನು ನಗುತ ದಾಶರಥಿ ॥೪೩॥

ಬರಿಯಖರನಲ್ಲಾನು ನಿನ್ನಯ ।
ಹರಣಜಳವನು ಪೀರ್ವದಾರುಣ ।
ಖರಕರನಲಾ ತಂಗಿಗೊದವಿದ ಮಾನಭಂಗವನು ।
ಹರಿದು ಕಳೆವುದಸಾಧ್ಯವೇ ನಿ ।
ನ್ನರಸಿಯಾ ಕಿವಿಮೂಗುಗಳನಾ ।
ನರಿದು ನಿನ್ನನು ಕೊಲುವೆ ನೋಡೆಂದೆಚ್ಚನಾಖಳನು ॥೪೪॥

ಎಚ್ಚ ಕಣೆಗಳ ರಾಮನಾಗಳೆ ।
ಕೊಚ್ಚಿದನು ಬಳಿಕವನ ರಥವನು ।
ಮುಚ್ಚಿದನು ಕೆಂಗರಿಯ ಪೊಸಮಸೆವೆತ್ತಬಾಣದಲಿ ॥
ಕಿಚ್ಚನುಗುಳುವಶರಗಳಿಂ ಖರ ।
ನುಚ್ಚ ಗಲೊಡಲನು ನೊಂದು ದೇವನು ।
ನುಚ್ಚುನುರಿಯಾಗಿಸಿದನಾತನ ತೇರನಾಕ್ಷಣದೆ ॥೪೫॥

ಲೇಸುಲೇಸೈ ರಾಮ ಕದನದ ।
ವಾಸಿ ನಿನಗಿನಿತೇಕೆ ನಿಲಿಸೈ ।
ಯೀಸುಪರಿಯಂತರವು ಕಾಣದೆ ಮೋಸವ್ಹೋದೆನಲಾ ॥
ಈಸಿಕೊಳ್ಳೆನ್ನೀಶರಂಗಳ ।
ಗಾಸಿಯೊಂದದೆ ನಿಂದೆಯಾದೊಡೆ ।
ಸಾಸಿ ನೀನೇ ಮೂರುಲೋಕದೊಳೆನುತ ತೇರುಳದು ॥೪೬॥

ಶರಗಳೋ ಕಡೆಗಾಲದಬುದಿಯ ।
ತೆರೆಗಳೋ ನಡುವಗಲದಿನಪನ ।
ಕರಗಳೋ ಎಂಬವೊಲು ಕರೆದನು ಶರವ ಸಾಸಿರವ ।
ಬರುವಬಾಣಂಗಳಿಗೆ ಭಾರಿಯ ।
ಸರಳನೆಸೆಯುತೆ ಕತ್ತರಿಸಿದನು ।
ಮರಳಿ ಮೊನೆಗಣೆಗಳನು ಬಿಟ್ಟನು ಬೇಗ ರಾಘವನು ॥೪೭॥

ಖರನ ಕರಥನು ಮುರಿದುಬಿದ್ದುದು |
ಬೆರಗನಾನುತಲಾಖಳಾಧಮ |
ನುರುವಗದೆಯಿಂದಪ್ಪಳಿಸಿದನು ದೂಷಣಾಂತಕನ ||
ಕೆರಳಿ ಪಜ್ಜೆಯನೆಳೆದು ಪಿಂದಕೆ |
ಭರದೊಳೈಂದ್ರಾಸ್ತ್ರದಲಿ ರಾಮನು |
ಖರನ ಶೀರ್ಷವನಿಳುಹೆ ಪೊಗಳಿದರಭ್ರದಲಿ ಸುರರು ||೪೮||

ಅರಸಿ ಕಂಡಳು ತನ್ನರಮಣನ |
ಧುರದಜಯವನು ಬಾಜೆ ತಬ್ಬಿದ |
ಳರಸ ನೊಂದೈ ಪಾಪಿದನುಜರ ಕೈಗಳಿಂದಕಟಾ ||
ಧರೆಯ ಸಾಮ್ರಾಜ್ಯವನು ನೀಗು |
ತ್ತುರುತರದ ವನವಾಸಕಷ್ಟದೊ |
ಳಿರುವ ನಿನಗೀದುರುಳರೊಂದೆಡೆ ಹಿಂಸೆಗೈವರಲಾ || ||೪೯||

ಹರಿಯು ನೀಂ ನಿನಗೇಪರಿಯುಬೇ |
ಸರಮುಮಿಲ್ಲವೆಸುತ್ತ ಲೋಕದೊ |
ಳೊರೆವರಾಮಾತಿರಲಿ ನರನಾಗುದಯಿಸಿದ ಬಳಿಕ ||
ಮೆರೆವಮಾಂಸದ ಮಜ್ಜೆಯೆಲುವಿನ |
ಬೆರಕೆಯಿಂ ಬಿಗಿದಿರ್ಪತನುವಿದ |
ನಿರಿಯೆ ನೋಯದೆ ಮುದವನಾಂಪ್ರದೆ ಎಂದಳಾಸುದತಿ ||೫೦||

ಅರಸಿ ನಿನ್ನಾಲಿಂಗನೆಯಸುಖ |
ದೊರೆದೊಡೆನಗಿರದಾವಗಂ ತಾಂ |
ಬರಲಿ ಬರ್ಪಕಷ್ಟವೆಲ್ಲವು ಕೊನೆಗೆ ಹಿತಕರವು ||
ಅರಿಗಳಾಯುಧವೆನ್ನ ಘಾತಿಸಿ |
ಕೊರಗಿಸುವುದೇ ನಿನ್ನ ಕೋಮಲ |
ಕರತಲಸ್ಪರ್ಶಾಮೃತಾಸೇಚನೆಯು ಬಲವಿರಲು ||೫೧||

ರಾಮವಾಕ್ಯಾಮೃತದ ವೃಷ್ಟಿಗೆ |
ಕೋಮಲಾಂಗಿಯು ಬಗೆನವಿಲು ಸು |
ಪ್ರೇಮದಿಂ ನಲಿದಾಡೆ ಸಮಯವು ತಮಗಿದೆಂದೆನುತ ||
ಮೈಮರೆತ ಖರದೂಷಣಾದ್ಯರ |
ಕೈಮೆಯಡಗಿಸಿ ನಮ್ಮಸಲಹಿದ |
ಭೀಮವಿಕ್ರಮ ಜಯಜಯೆಂದುದು ಬಂದು ಮುನಿನಿಕರ ||೫೨||

ಸುರಪನನು ಶರಭಂಗಮುನಿಪನ |
ವರತಪೋವನಕೆಳಸಿ ಸಕಲರು |
ಬೆರಸಿ ಯೋಜಿಸಿ ದುಷ್ಟನಿಗ್ರಹಕೋಸುಗವೆ ನಾವು ||
ಅರಸ ನಿನ್ನನು ತಂದೆವಿಲ್ಲಿಗೆ |
ದುರುಳರೀದಿನವಳಿದುಪೋದರು |
ಪರಮಪುರುಷನೆ ಸೈರಿಸುವುದೆನೆ ರಾಮ ಮನ್ನಿಸಿದ ||೫೩||

ಅಂತು ಸಂಧಿ ೨ಕ್ಕಂ ಪದ್ಯಂಗಳು ೧೦೫ಕ್ಕಂ ಮಂಗಳಂ.

ಮೂರನೆಯ ಸಂಧಿ

ಸೂಚನೆ|| ದಶಮುಖನಕಂಪನನ ಮುಖದಿಂ |
ದಸಮುಖರಮುಖರಳಿವನರಿದು |
ಬ್ಬಸದಿ ಮಾರೀಚನಸಹಾಯದಿ ನವನಿಜೆಯನೊಯ್ದಂ ||

ಖರನಮರಣವ ಕಂಡು ಲಂಕಾ |
ಪುರಿಗಕಂಪನನೆಂಬರಾಕ್ಷಸ |
ನಿರದೆ ಭರದಿಂದೋಡಿ ಕಾಣುತ ರಾವಣಾಸುರನ ||
ಖರನೆಮೊದಲಾದಖಿಳದನುಜರು |
ಧುರದೆ ಹತರಾದುದನು ಪೇಳ್ದಂ |
ಧುರಜನಸ್ಥಾನದ ವಿನಾಶವನರುಹಿದನು ಬಳಿಕ ||೧||

ಕೇಳದೊಡನೆಯೆ ರೋಷವಹ್ನಿ |
ಜ್ವಾಲೆಯುಂಗವಸುಡಲಕಾಲದೆ |
ಕಾಲನೆಂತಾರಾಕ್ಷಸೇಂದ್ರರ ಸೋಂಕಲೆಳಸಿದನು ||
ಕೋಳುಹೋದುದೆ ತನ್ನ ಪಾಳೆಯ |
ಪೇಳು ತನ್ನನು ಗಣಿಸದದನುರೆ |
ಪಾಳನೆಸಗಿದಖೂಳನಾವನು ಬೊಮ್ಮನೋ ಹರಿಯೋ ||೨||

ಎಂದು ಬೆಸಗೊಳುತಿರ್ಪದನುಜನ ।
ಮುಂದುಗಡೆಯೊಳ್ಬಂದು ಬಿದ್ದಳು ।
ಮಂದಿ ಬೆದರಲು ಮೂಕೊರತಿಯಾಕುಮತಿಕುಹಕಕೃತಿ ॥
ಇಂದಿದೇನಿದು ಬಿದ್ದುದೆನುತಲಿ ।
ಸಂದೆಗಂಬಡುತಾಗ ಕಂಡನು ।
ಸಂದಕಿವಿಮೂಗಿನ ಲತಾಂಗಿಯ ತನ್ನತಂಗಿಯನು ॥ ೩ ॥

ಏನಿದೇನಿದು ತಂಗಿ ತಾನೀ ।
ಹಾನಿಯಾರಿಂದಾಯ್ತು ನಿನಗೀ ।
ಮಾನಭಂಗವನೆಸಗಿದಾತನು ಜೀವದಿಂದಿಹನೆ ।
ಆನಪುಂಸಕನಾವನೆಲ್ಲಿಹ ।
ನೇನುಕಾರಣವೆಂಬುದೆಲ್ಲವ ।
ನೀನುನನ್ನೊಡನುಸಿರು ಬೇಗದೊಳೆಂದು ಖಳನುಡಿದ ॥ ೪ ॥

ಅಣ್ಣ ನೀನಿದನೇಕ ಕೇಳುವೆ ।
ತಣ್ಣಗಾದುದು ದನುಜರೈಸಿರಿ ।
ನಿನ್ನವಂದಿಗರಿರಲು ರಾಕ್ಷಸಕುಲವು ವರ್ಧಿಪುದೆ ॥
ತನ್ನದೇಶವೆನಿತ್ತುಮೇಣು ।
ತೃಪ್ನವೇನಾದ್ಯಂತಜನಗಳ ।
ಗುನ್ನತಸ್ಥಿತಿಯೊದವಲೇನೇನಿಹುದುಸಾಧನವು ॥ ೫ ॥

ಎಂಬಿವನು ತಾಂ ಬಗೆಗೆ ತಾರದೆ ।
ದಂಭದಧಿಕಾರಿಗಳ ಮಾತನು ।
ನಂಬುತವರಂತಿರ್ಪನೃಪತಿಯು ರಾಜ್ಯಮುಳಿಯುವುದೇ ॥
ಕುಂಭಕುಚೆಯರಿಗೊಲಿದು ನೀನಲ ।
ರಂಬನಾಟದೆ ಹೊತ್ತುಕಳೆಯಲು ।
ಚುಂಬಿಸಳೆ ನಿನ್ನಿಳೆಯನಪಜಯಲಕ್ಷ್ಮಿ ತಾನೊಲಿದು ॥೬॥

ಮೂಜಗವು ತಲ್ಲಣಿಸೆ ಸಕಲರ ।
ನಾಜಿಯಲಿ ಗೆದ್ದುದಕೆ ಫಲವೇ ।
ನಾಜನಸ್ಥಾನವಲೆ ವಿಜನಸ್ಥಾನವೆನಿಸಿದುದು ।
ವ್ಯಾಜವಿಲ್ಲದೆ ತರಳರಿರ್ವರು ।
ರಾಜಸುತರದನಿಂತೆಸಗಿದರು ।
ಸೋಜಿಗವು ನಿನಗರುಹದಿರ್ಪುದು ಬೇಹಿನವರಿದನು ॥೭॥

ಖರನ ಕೊಂದರು ದೂಷಣನ ಶಿರ ।
ವರಿದರಾತ್ರಿಶಿರನ ಸಿರಂಗಳ ।
ತರಿದರುಳಿದಾರಕ್ಕಸರ್ಕಳನೆಲ್ಲ ಸದೆಬಡಿದು ।
ಸುರರಿಪುಕ್ಷಯಕೃತಿಗೆ ವಿಷ್ಣೋ ।
ಶ್ವರನಪೂಜೆವೊಲೆನ್ನಭಂಗಿಸಿ ।
ತರಳೆಯನು ಕೊಲಲಾಗದೆಂಬಾಧರ್ಮದಿಂದುಳುಹಿ ॥೮॥

ಬಿಟ್ಟರೆನ್ನೊರ‍್ವಳನು ತಾನಹ ।
ಕೆಟ್ಟಕೇಡನದಾರಿಗೊರೆಯಲಿ ।
ಹುಟ್ಟ ನಿನ್ನೊಡನೆನ್ನಮಾನವು ಬಟ್ಟಬಯಲಾಯ್ತು ॥
ದಿಟ್ಟರೆನಿಪವರಟ್ಟಹಾಸವ ।
ನಿಷ್ಟೆನುತ ನಿರ್ಣಯಿಸಲಸದಳ ।
ನಿಟ್ಟಿಸಲ್ಕಿನಗಳಿವ ತರ್ಪರು ಕಟ್ಟಕಡೆಯೊಳಗೆ ॥೯॥

ನುಡಿಯು ಕೇಳ್ದೊಡನಿರದೆ ಕಿಡಿಗೊಂ ।
ಡೆಡೆಯುರಕ್ಕಸಗಡಣದೆದೆ ಗಡ ।
ಗಡನೆ ನಡುಗಲ್ಕೆದ್ದು ಕಡುಗವ ಜಡಿದು ಜಳಪಿಸುತೆ ॥
ನುಡಿನುಡಿ ಸಹೋದರಿಯೆ ಮೃತ್ಯುವಿ ।
ನುಡಿಜೆರಗ ಜಾರಿಸಿದಕೊಬ್ಬಿನ ।
ಕಡುಹುಕಾರರದಾರು ತೊಡೆವೆನು ಬಾಳದಕ್ಕರವ ॥೧೦॥

ಎಲೆಲೊ ನರಗುರಿಗಳಿರ ನೀವೆ ।
ನ್ನಳವನರಿಯದೆ ಕೆಣಕಿ ಕೆಟ್ಟರಿ ।
ಫಲವನುಣ್ಣಿರಿ ಯೆನುತಲಸುರಾಧಿಪನು ಲಟಕಟಿಸೆ ॥
ಬಲುಭುಜನ ತಬ್ಬಿದಳು ತಡೆದಳು ।
ಚಲದಪರಿಯಿದು ಸಾಗದವರೊಳು ।
ನೆಲದ ಹುಲುನರರೆಂದು ಭಾವಿಸಬೇಡ ನೀನವರ ॥೧೧॥

ಕೇಳಿ ಬಲ್ಲೈ ನೀನಯೋಧ್ಯೆಯ |
ನಾಳುತಿರ್ದನ ದಶರಥೇಂದ್ರನ |
ಮೇಲೆನಿಪ ತನುಜಾತರೆಸೆವರು ರಾಮಲಕ್ಷ್ಮಣರು ||
ನೀಳವಾಗಿಹ ತೋಳು ಮೇಣ್ಸವಿ |
ಶಾಲವಾಗಿಹಚಕ್ಷು ವಲ್ಕಲ |
ಚೇಲವಂಗಜರೂಪು ಶೋಭಾಕರವು ರಾಮನಿಗೆ ||೧೨||

ಧನುವ ಧರಿಯಿಸಿ ಕರದೊಳಾವಗ |
ಮನಲಕೀಲವನುಗುಳ್ವಬಾಣವ |
ನನುಗೊಳಿಸುತೆಚ್ಚರದೊಳಿರ್ಪನು ಶೂರರಘುವೀರ ||
ಅನಿಮಿಷರಿಗೀಕ್ಷಿಸುವೊಡರಿವಾ |
ಅನುಪಮನ ಕೈಚಳಕಮಿಷುಗಳ |
ನೆನಿತುವೇಗದೆ ತೆಗೆವವೂಡುವನಿಸುವನೆಂಬುದಿದು ||೧೩||

ಏನನುಜ್ಞೆಯನೀವನಣ್ಣನು |
ತಾನದೆಲ್ಲನಿತುವನು ಮೀರದೆ |
ಮಾನಿಲಕ್ಷ್ಮಣನವನನೇ ನೆಳಲಂತೆ ಪೊದ್ದಿಹನು ||
ಮೀನಕೇತನನರಸಿಯನು ನುಸಿ |
ಗಾಣುವಾಕಡುರೂಪನೊಂದಿದ |
ಮಾನಿನೀಮಣಿಯೂರ್ವಳಿರ್ಪಳು ರಾಣಿ ರಾಮಂಗೆ ||೧೪||

ಇಂದುವನು ನಗುತಿಹುದು ವದನವು ।
ಬಂದುಗೆಯನಾತುಟಿಯು ಪಳಿವುದು ।
ಮಂದಗತಿಗಳುಕುತ್ತ ಮದಗಜಮುಡವಿಗೈದಿದುವು ॥
ಸುಂದರಾಂಗಿಯ ನೇತ್ರಯುಗಮರ ।
ವಿಂದವನು ಸೋಲಿಪುದು ಸಂಪಗೆ ।
ಯಂದವನು ಕಡೆಗಣಿಸಿ ಮೆರೆವುದು ಲಲಿತನಾಸಿಕವು ॥ ೧೫ ॥

ಜನಕಭೂಪನ ಸುತೆಯು ಸೀತೆಯು ।
ಘನತರಮೆನಿಪ್ಪಾಸ್ವಯಂವರ ।
ದನುವನಾಲಿಸಿ ಪೋಗಿ ಮಿಥಿಲೆಗೆ ನೀನು ಪೂರ್ವದಲಿ ॥
ಧನುವನೆತ್ತದೆ ಭಗ್ನಮಾನಸ ।
ನೆನಿಸಿ ಹಿಂದಿರುಗಿದೆಗಡಾ ತ ।
ದ್ವನಿತೆಯೇ ತಾನಾಗಿಯೆಮ್ಮೆಡೆಗಿಂದು ಬಂದಿಹಳು ॥ ೧೬ ॥

ನಿನ್ನರೂಪಿಂಗವಳ ಚೆಲುವಿಕೆ ।
ಯುನ್ನ ನಾನೊರೆಯಿಕ್ಕಿ ಸಮನೆಂ ।
ದುನ್ನತೋತ್ಸವದಿಂದಲವಳನು ಪಿಡಿಯಲನುವಾಗೆ ॥
ಕುನ್ನಿ ಫಡ ಹೋಗೆನುತ ಲಕ್ಷ್ಮಣ ।
ತನ್ನ ಸರಳಿಂದೆನ್ನನೀಪರಿ ।
ಬನ್ನಬಡಿಸಿದನಣ್ಣ ನಿನ್ನಿಂದೆನಗೆ ಪರಿಭವವು ॥ ೧೭ ॥

ಅಸುರದ ಸಕಲಾಯುಧಂಗಳ |
ಸಾಸವಿವರೊಳ್ನಡೆಯದೆಂತುಟು |
ವೇಸವನು ಮರೆಮಿಸುತೆ ಮುನಿಗಳತೆರದೆ ಬಂದಿಹರೊ ||
ಲೇಸರಿದು ನೀನಂತುಟವರನು |
ಮೋಸದಿಂದಲೆ ನಾಶಪಡಿಸುವ |
ದೇಸಿಯೊಂದಿಹುದದನು ತಿಳಿಪುವೆ ಕೇಳು ಕೃಪೆದಾಳು ||೧೮||

ತರುಣಿಯಾ ನಡೆನುಡಿಗಳಿಗೆ ರಘು |
ವರನು ಮೆಚ್ಚಿಹನವನ ಸುರುಚಿರ |
ತರಗುಣಂಗಳಿಗಾಕೆ ಸೋತ್ತಿಹಳಿರ್ಪರೊಂದೆನಲು ||
ಮೆರೆಯುವೆಣೆವಕ್ಕಿಗಳೊ ತಾವೆನ |
ಲೆರಕಗೊಂಡಿಹರದರಿನವನಾ |
ಸರಸಿಜಾಕ್ಷಿಯ ಜತೆಯು ತಪ್ಪಲು ಕೊರಗಿ ಸಾಯುವನು ||೧೯||

ಪೇಳುವೆನು ನಾನೊಂದುಪಾಯುವ |
ಕೇಳು ಮಾರೀಚನನು ಮಾವನ |
ನೋಲಗಿಸಿಯೊಲಿಸುತ್ತ ಕಾರ್ಯವ ಸಾಧಿಪುದು ಮತವು ||
ತಾಳ ಹೊಮ್ಮಿಗವರಿಜನವನಾ |
ಬಾಲೆಯಿದಿರೊಳ್ಸುಳಿಯಲಾಕೆಯು |
ತಾಳುತಾಸೆಯನದನು ಪಿಡಿಯೆನುತರಸನನು ಕಾಡೆ ||೨೦||

ಅಸಿಯುಳಿಷ್ಟವ ಸಲಿಸಬೇಕೆನು |
ತಸಮುಶೂರನು ಪಿಡಿಯಲೈತರ |
ಲೆಸೆದು ಬಳಿಯಲಿ ಸಿಕ್ಕಿತೆನಲುಸವಸದಿ ಲಂಘಿಸುತ ||
ಸಸಿನೆ ಮುಂದಕೆ ಪಾರುತಂತಂ |
ತಸದೃಶದ ಬೆಡಗಿಂದಲುರುಸಾ |
ಹಸದೊಳವನನು ಸೆಳೆದು ದೂರಕೆ ಸಾರ್ದು ತಾನಿರದೆ ||೨೧||

ತಮ್ಮಲಕ್ಷ್ಮಣ ಸೀತೆ ಹಾ ಎಂ |
ದುಮ್ಮಳಿಸುತಾರಾಮನಂದದೊ |
ಳೊಮ್ಮೆ ಕೂಗಲು ಕೇಳಿ ಲಕ್ಷ್ಮಣನಾಂತು ಕಳವಳವ ||
ಹಮ್ಮದಂಗೊಳುತೆದ್ದು ರಾಮನ |
ನೆಮ್ಮದಿಗೆ ಭಯವೊದವಿತೆನ್ನುತ |
ಗಮ್ಮನಾದನಿವಿಡಿದು ತಾನಲ್ಲಿಂದ ತೆರಳುವನು ||೨೨||

ಕಡುಭರದಿ ನೀಂ ಯತಿಯ ವೇಷವ |
ಗಡಣಿಸುತಲಾಶ್ರಮವ ಪೊಕ್ಕಾ |
ಮಡದಿಯನು ಪಿಡಿತರ್ಪುದುಚಿತವಿದೆಂದು ಖಳ ನುಡಿಯೆ ||
ಒಡನೆ ತಂಗಿಯ ತಬ್ಬಿ ಮುದ್ದಿ |
ಟ್ಟಡಸಿದಾಪತ್ತಿನಲಿ ತನ್ನನು |
ಬಿಡದೆ ಸಲಹಿದೆ ತಾಯೆಯೆಂದೆನುತೆದ್ದನಸುರಪತಿ ||೨೩

ಆಗಳಾಜ್ಞೆಯನಿತ್ತು ರಥವನು ।
ಬೇಗ ತರಿಸುತ್ತಡರಿದನು ಲೇ ।
ಸಾಗಿ ದುರ್ವೃತ್ತಿಯನು ದೂರೀಕರಿಸಿ ವಿಪಿನದಲಿ ॥
ಯೋಗಮಾರ್ಗದೊಳಿರ್ದು ಲೌಕಿಕ ।
ರಾಗವೆಲ್ಲವ ನೀಗಿ ಶಿವಸಂ ।
ಯೋಗಮಾನಸನಾದ ಮಾರೀಚನನು ತಾಂ ಸೇರಿ ॥ ೨೪ ॥

ರೋಗಮುಡಿಸಿಹುದೆನಗೆ ನೀಂ ನೆರ ।
ವಾಗಿ ತಕ್ಕುದೆನಿಪ್ಪಮುದ್ದನು ।
ಬೇಗನಿತ್ತೋವೆಂದು ದೈನ್ಯವ ಬೀರಿ ಯಾಚಿಸಲು ॥
ಆಗಮೋದಿತತತ್ವಪರನೀ ।
ನಾಗುತೆನ್ನಿಂದಲ್ಪಮತಿಯಿಂ ।
ದೀಗಳೇನನು ಪಡೆಯಲೈದಿದೆ ಯೆಂದನಾದನುಜ ॥ ೨೫ ॥

ಪೇಳಲೇನನು ಮಾವ ರಕ್ಕಸ ।
ರೇಳಿಗೆಗೆ ಕಡುಭಂಗಮೊದವಿತು ।
ಕೀಳುತರದಾಹುಲುನರರು ಬಲುಗೂಳಿಯಾದರಲಾ ॥
ಕೇಳದೊಡೆ ನಮ್ಮವರ ವಿಧಿಯನು ।
ಬಾಳಬಹುದೇ ಧರೆಯೊಳಗೆ ಬ ।
ಲ್ಲಾಳತನ ತಾನೆತ್ತಲಡಗಿತೊ ದಾನವರಕುಲದ ॥ ೨೬ ॥

ಬಂದಿಹರು ಸಾಕೇತಪುರವರ ।
ದಿಂದ ಭೂಪತಿದಶರಥೇಂದ್ರನ ।
ನಂದನರುಗಡ ರಾಮಲಕ್ಷ್ಮಣರೆಂಬಬಾಲಕರು ॥
ಚಂದಿರಾನನೆ ಸೀತೆ ಜತೆಯಲಿ ।
ಬಂದಿಹಳು ಗಡ ತರಳರವದಿರು ।
ಹೊಂದಿ ಮುನಿವೇಷವನು ಚರಿಪರುಗಡ ತಪೋವನದೆ ॥ ೨೭ ॥

ಅಲ್ಲಿ ಕಾವಲಿಗಿರಿಸಿದೆಮ್ಮಯ ।
ಬಲ್ಲಿದರು ಪದಿನಾಲ್ಕುಸಾಸಿರ ।
ಮಲ್ಲರೆನಿಸಿದಭಟರ ಸಿಷ್ಕಾರಣದೆ ಕೊಲ್ಲುತಲಿ ॥
ಇಲ್ಲ ಸಮರಾಂಗಣದೆ ಸಮಭಟ ।
ರೆಲ್ಲಿಯುಂ ಖರದೂಷಣರಿಗೆಂ ।
ದೆಲ್ಲರಾಡುತ್ತಿರ್ದತನ್ನಯ ಸೋದರರ ಮುರಿದು ॥ ೨೮ ॥

ಲಲನೆಯರ ಸೌಭಾಗ್ಯಲಕ್ಷ್ಮಿಯ ।
ಚಲುವಿನರಗಿಳಿಶೂರ್ಪಣಖೆಯನು ।
ಕಲಹವಿಲ್ಲದೆಮೂಗುಕಿವಿಗಳನರಿದುಕಳುಹುತಲಿ
ನೆಲದೊಳೆನಗಾಚಂದ್ರಸೂರ್ಯರು ।
ನೆಲಸಿರುವಪರಿಯಂತ ಕೊರತೆಯ ।
ನಿಲಿಸಿದರು ಪಾಪಿಗಳು ತಮ್ಮಯ ಕೊಬ್ಬಿನುಬ್ಬಿನಲಿ ॥ ೨೯ ॥

ಮಾನ ನಿನ್ನಸಹಾಯಮಿರಲೀ ।
ರಾವಣಂಗಿದಿರಾರು ಲೋಕದೊ ।
ಳಾವಘನಪೌರುಷರು ಮಾನಿಸಪುಳುಗಳೆಂಬವರು ॥
ಸಾವು ಸಮನಿಸದಂತೆ ಸೀತಾ ।
ದೇವಿಯನು ಹಾರಿಸುವುಪಾಯವ ।
ಭಾವಿಸುತ ಮನದೊಳಗೆ ನಿನ್ನಯಬಳಿಗೆ ಬಂದಿಹೆನು ॥೩೦॥

ಆಲಿಸೈ ಮುನ್ನಾಸ್ವಯಂವರ ।
ಕಾಲದಲಿ ನೆರೆದಿರ್ದಪೃಥ್ವೀ ।
ಪಾಲರಿದಿರೊಳು ಹೆದೆಯನೇರಿಸುವಾಗ ಬಿಲ್ಲುದಿಗೆ ॥
ಲೋಲಲೋಚನೆಯಂದಚಂದದ ।
ಮೇಲೆ ತನ್ನಯಮನವು ಮೋಹಿಸಿ ।
ಕಾಲು ಜಾರಿದೊಡೆನ್ನನೀಕ್ಷಿಸಿ ನಕ್ಕಳೇಡಿಸುತೆ ॥೩೧॥

ಇಂದು ತಂಗಿಗೆ ಮಾನಭಂಗವು ।
ಬಂದುದೀಕೆಯದೆಸೆಯಿನಲ್ಲದೆ ।
ಸುಂದರಾಂಗಿಯಸೊಂದಬೇಕೆಂಬಾಸೆ ತನಗಿಹುದು ॥
ಒಂದು ಮೂರಂತಿರಲಿ ಮಧ್ಯದ ।
ಕುಂದಿನಿಂದಲಿ ನಮ್ಮಕುಲವೇ ।
ಜೆಂದುದಿದಕಿಂದವಳನಪಹರಿಸುವುದೆ ಮುಯ್ಯಿತ್ತೆ ॥೩೨॥

ಅಸುರಮುನಿ ಕೇಳಿದಕುಪಾಯವ ।
ನುಸಿರುವೆನು ನೀನಲ್ಲದಿತರರಿ ।
ಗಸದಳವಿದೆಂದರಿದು ಯೋಜಿಸಿ ಬಂದೆನೊಲವಿನಲಿ ॥
ಹುಸಿಯುದಂದದೊಳೀಯಭೀಷ್ಟವ ।
ನೆಸಗುತೆನ್ನನು ಸಲಹು ನೀನೆಂ ।
ದಸುರಪತಿ ಕುಲನಾಶಮಂತ್ರವನುಸಿರಿದನು ಖಳಗೆ ॥ ೩೩ ॥

ಬೆಚ್ಚಿದನು ಮಾರೀಚನಂದಿನ ।
ನಚ್ಚು ನೆನಪಿಗೆಬರಲು ರಾಮನ ॥
ಬಚ್ಚಣೆಯಬಾಣವದು ನೆಟ್ಟಂತಾಗೆ ಹೃದಯದಲಿ ॥
ನುಚ್ಚುನೂರಾಯ್ತೆದೆಯು ಬಳಿಕಿರ ।
ದೆಚ್ಚರೊಂದುತೆ ರಾಮನೆಂಬಾ ।
ಕಿಚ್ಚು ಪರ್ಬುತೆ ದನುಜವಂಶವ ಸುಟ್ಟವೊಲು ಬಗೆದು ॥ ೩೪ ॥

ಬಂದನೇನೈ ದಾನವಾರಿಯು ।
ತಂದನೇನೈ ಮರಣದೋಲೆಯ ।
ನಂದಿತೇನೈ ದನುಜರೈಸಿರಿಯೆಂಬಪೆರ್ಜೊಡರು ॥
ಕಂದ ನಿನ್ನೀಬುದ್ಧಿಗಿಂದಿದ ।
ತಂದು ಚಾಚಿದಳೇನು ಪಾಪಿನಿ ।
ಮಂದಮತಿಚಲಗಾತಿ ಖಲರತಿಯುಸತಿಮೂಕೊರತಿ ॥ ೩೫ ॥

ರೂಪವತಿ ತಾನೆನ್ನುತವರೊಳು |
ಪಾಪಕೃತ್ಯಕ್ಕೆಳಸಲಿಂತುವಿ |
ರೂಪವೆಸಗಿದರಿವಳಿಗಲ್ಲದೆ ಬೇರೆ ಕಾಣಿಸದು |
ಚಾಪಲದೆ ಪುರುಷರೊಳು ಕಪಟಾ |
ಟೋಪವನು ನೆರೆತೋರ್ಪ ಪೆಣ್ಗಳ |
ಗೀಪರಿಯು ಮದ್ದರೆದೊಡಲ್ಲದೆ ಬುದ್ಧಿ ತಾಂ ಬಹುದೆ ||೩೬||

ರಾಮಲಕ್ಷ್ಮಣರಾರು ತಾನಾ |
ಭೂಮಿಸುತೆಯಾರೆಂಬುದನುನೀಂ |
ಕಾಮವಶದಿಂ ಮನಕೆ ತಾರದೆ ಕೆಣಕಿ ಕೆಡಬೇಡ ||
ಈಮಹೀಭಾರವನು ತಗ್ಗಿಪ |
ನೇಮದಿಂದಿವರುದಯಿಸಿರ್ಪ್ರ |
ದ್ದಾಮಮಹಿಮನನಾದಿಪುರುಷನನಂತಲಕ್ಷ್ಮಿಯುರು ||೩೭||

ಖಲರ ಮಲಿನಾಚರಣೆಗಳು ಭೂ |
ತಲದೆ ವೃದ್ಧಿಯನೊಂದಲಾಗಳೆ |
ಕೆಲಕೆ ನೂಕುತೆ ಮತ್ತೆ ಸನ್ಮಾರ್ಗವನು ನಿಲಿಸಲ್ಕೆ ||
ಜಲಜನಾಭನು ಹಲವುವೇಳೆಯೊ |
ಳೊಲಿದು ಧರಣಿಯೊಳುದಿಸಿ ದುರುಳರ |
ಕೊಲುವನೆಂಬರಿವೆತ್ತಲಡಗಿತು ನಿನ್ನ ಚಿತ್ತದಲಿ ||೩೮||

ಮಗುವು ರಾಘವನೆಂದುಪೇಕ್ಷಿಸಿ ।
ವಿಗಡವಿಶ್ವಾಮಿತ್ರನಾಶ್ರಮ ।
ವುಗುತ ಪಿಂತೆ ಸುಬಾಹುವಾನುಂ ಕಾಳಗವನೆಸಗೆ ॥
ಬಗೆಯುತೆನ್ನನು ತೃಣದವೋಲ್ಕಿರು ।
ನಗೆಯ ಪಸರಿಸುತಂಬೆರಡನಿಡ ।
ಉಗಲಿತಸು ತಮ್ಮನಿಗೆ ಕೆಡೆದೆನು ನಾನು ಕಡಲೊಳಗೆ ॥೩೯॥

ಇರಲು ನಿಜರೂಪಿನಲಿ ರಾಘುವ ।
ಶರಕೆ ತುತ್ತಹೆನೆಂಬಭಯದಿಂ ।
ದುರುತಪಸ್ವಿಯ ಚರ್ಯೆಯಿಂದೀಬನದೆ ಜೀವಿಪೆನು ॥
ಅರಿಯಲಾಖರದೂಷಣಾದ್ಯರು ।
ಕಿರಿಯರೇ ಬಲದೊಳಗೆ ನೀನಿದ ।
ನರಿದರಿದು ಮೋಲ್ವಾಯ್ವುದುಚಿತವೆ ತಾಟಕಾರಿಯೊಳು ॥೪೦॥

ಕಾಮಶರಕೀಡಾಗಿ ಸೀತಾ ।
ಭಾಮಿನಿಯನುರೆ ಬಯಸಿ ಸುಜನ ।
ಪ್ರೇಮವಿರಹಿತನಾಗಿ ಧರ್ಮವಿದೂರನೆಂದೆನಿಸೆ ॥
ಭೂಮಿ ಹೇಸದೆ ಕೀರ್ತಿ ಮಾಸದೆ ।
ನಾಮವಳಿಯದೆ ಮೃತ್ಯುವೆಳೆಯದೆ ।
ರಾಮಬಾಣವು ನಿನ್ನಸದೆಯದೆ ಬಿಡುವುದೇಬರಿದೆ ॥೪೧॥

ಬೇಡಬೇಡಿಂತಹಕುಚೇಷ್ಟೆಯ |
ಮಾಡದಿರು ರಘುರಾಮನೊಡನಿಂ |
ತಾಡಿ ಕೆಟ್ಟರು ಮುನ್ನ ಹಲಬರು ದುರುಳತನದಿಂದ ||
ನೋಡುನೋಡುತ ಕೊಲುವಮಾರಿಯ |
ದಾಡೆಯಲುಗುವರುಂಟೆ ನಿನ್ನನು |
ಬೇಡಿಕೊಂಬೆನು ಮರಳು ಪುರಕೆಂದಸುರಮುನಿ ನುಡಿದ ||೪೨||

ರೋಗಿಗೌಷಧ ಸೇರದಂದದಿ |
ಭೋಗಿಗುರೆ ತಪ ರುಚಿಸದಂದದಿ |
ಯೋಗಿಗಾಸಂಸಾರಲಂಪಟ ಸೊಗಸದಂದದಲಿ ||
ತಾಗಿದೊಡನೀಮಾತು ಕಿವಿಗಳ |
ಗಾಗ ರೋಷಜ್ವಾಲೆ ಕಿಡಿಯಿಡೆ |
ಬೇಗನೇಳುತ ಕಡುಗಗೊಂಡನು ಜಡಿದು ರಾವಣನು ||೪೩||

ಏನಿದೆಲವೋ ನಿನ್ನನುಡಿಗಳು |
ಭಾನುವಿನ ಮುಂದಂಧಕಾರವೆ |
ಶ್ಯೇನನಿದಿರೊಳು ಪಾರಿವಾಳವು ಸುಳಿದು ಜೀವಿಪ್ಪುದೆ ||
ಜೇನುಹುಟ್ಟನೊಳೆರಗಿ ನೊಣವೆ |
ತ್ರಾನುಮುಳಿಯಲುಬಹುದೆ ತನಗಾ |
ಮಾನವರ ಪಡಿಗಟ್ಟ ನುಡಿವೆಯ ನಿಲಿಸು ನಾಲಗೆಯ ||೪೪||

ವೃದ್ಧನೆನ್ನುತ ನಿನ್ನಬಳಿಗಾಂ ।
ಪೊದ್ದಿದುದಕಲೆನಾಲಗೆಯು ಮೊಳ ।
ದುದ್ದ ಸಿಗುರಿತು ತನ್ನನಾರೆಂದರಿಯದೀಪರಿಯು ॥
ಬುದ್ಧಿವಾದವ ಪೇಳತೊಡಗಿದೆ ।
ಕ್ರುದ್ಧನಾಗುತ ನಿಂದೆನಾದೊಡೆ ।
ಯುದ್ಧರಂಗದೆ ಕಾಲರುದ್ರನು ಸದ್ದುದೋರುವನೆ ॥೪೫॥

ಇರಲಿ ನಿನ್ನಯ ಸಲುಬು ತನ್ನಯ ।
ಬರವಿಗುತ್ತರವೇನು ಸೀನಾ ।
ಹರಿಣರೂಪವನಾಂತು ಬರ್ಪೆಯೊ ಬಾರೆಯೋ ಪೇಳು ॥
ಹರಣದಾಸೆಯುದಿರ್ದೊಡೆನ್ನೊಡ ।
ನಿರದೆ ಬರ್ಪುದು ತಪ್ಪಿದೊಡೆ ನಿ ।
ನ್ನುರಕೆ ಚಾಚುವೆ ಚಂದ್ರಹಾಸವನೆನುತ ಗರ್ಜಿಸಿದ ॥೪೬॥

ಕೇಳದೊಡನೆಯೆ ಭಯಪಯೋಧಿಯೊ ।
ಳಾಳಿದನು ಮೈಬೆಮರಿತಾಕ್ಷಣ ।
ಖೂಳನಿವನೊರೆದಂತೆ ನಡೆಸದೆ ಮಾಣನೆಂದೆನುತ ॥
ಕಾಲವೊದವಿತು ತನಗಮೀಕೇ ।
ಡಾಳಿಯಿಂದಸು ತೊಲಗದಿರದು ಕೃ ।
ಪಾಳುರಾಘವನಸ್ತ್ರಕಿದ ಬಲಿಯಾಗಲಿರ್ಪೆನು ॥೪೭॥

ದೂರಕೆಳೆದೊಯ್ಯುತ್ತಲವನನು ।
ಮೀರಿ ದಣಿಸಿದೊಡಿರದೆ ಕೋಪಿಸಿ ।
ಕ್ರೂರಲಗಿನಿಂದೆನ್ನ ಸಂಹರಿಸುವನು ರಾಘವನು ।
ಧಾರಿಣಿಯೊಳೀಸ್ಸೈಪು ಮತ್ತಿ ।
ನ್ನಾರಿಗಾದೊಡಮುಂಟೆ ಮುಕ್ತಿಯು ।
ನಾರಿ ಸೇರುವಳೆನಗೆ ತಾನೇ ಧನ್ಯನಹೆನೆಂದ ॥ ೪೮ ॥

ಅಳುಕಲೇಕಿನ್ನಿದಕೆನುತ ಮನ ।
ದೊಳಗೆ ನಿರ್ಧರಿಸುತ್ತ ದನುಜನು ।
ವಿಳಯರುದ್ರನತೆರದೆ ನಿಂದಿಹರಾವಣನ ನೋಡಿ ॥
ಎಲವೊಪಾಪಿಯೆ ನನ್ನನುಡಿಗಳು ।
ಫಲಿಸದಾದುವು ನಿನ್ನಚಿತ್ತದ ।
ಚಲವಬಿಡೆ ನೀನಾದುದಾಗಲಿ ಬರ್ಪೆನೆಂದೊರೆದು ॥ ೪೯ ॥

ತೆರಳುವಾಮಾರೀಚನನು ಖಳ ।
ರರಸನಾಗಳೆ ಕರೆದು ತನಗಿ ।
ನ್ನರಿಯು ಗೆಲುವುದು ಸುಲಭಮಾದುದು ಮಾವರಥವೇರು ॥
ತರುಣಿಯನು ಕರೆತಂದು ಸಗ್ಗದ ।
ಪರಮಸೌಖ್ಯವನೊಂದೆನುತ್ತಲಿ ।
ಪರಸುತೆನ್ನೊಡನಿಂದು ಬಾರೈ ರಾಮನಾಶ್ರಮಕೆ ॥ ೫೦ ॥

ಬರೆಯುತೀಪರಿ ರಥವನೇರಿಸಿ ।
ಸುರವಿರೋಧಿಯುಮನದಭೀಷ್ಟವ ।
ಭರದೆ ಪಡೆಯುವೆನೆಂಬಸಂಭ್ರಮದಿಂದ ಪೊರಮಡುತ ॥
ಪರಿಪರಿಯೊಳೊಪ್ಪುತಿಹಪಟ್ಟಣ ।
ಗಿರಿವನಂಗಳ ದುರ್ಗನದಿಗಳ ।
ನಿರದೆ ಕಳೆಯುತ ದಂಡಕಾವನಮಧ್ಯದೇಶವನು ॥ ॥ ೫೧ ॥

ಸೇರಿ ಕದಳೀವನದ ಮಧ್ಯದೆ ।
ತೋರುತಿರ್ಪಾಶ್ರಮವನೊಂದನು ।
ದೂರದಿಂದಲೆ ಕಾಣುತಿದು ಪೊಸತಾಗಿತೋರುತಿದೆ ।
ತೇರನಿಲ್ಲಿಯೆ ನಿಲ್ಲಿಸೆಂದಾ ।
ಸಾರಥಿಗೆ ಸೂಚಿಸುತಲಿಳಿದನು ।
ನಾರುಮುಡಿಯನು ಧರಿಸಿ ಮಾವನೊಳೆಂದನಸುರೇಂದ್ರ ॥ ೫೨ ॥

ಮಾವ ಕೇಳಯಾಶ್ರಮವು ಪರಿ ।
ಭಾವಿಸಲು ರಾಮನದು ನೀನೀ ।
ಠಾವಿನಲಿ ನಿನ್ನಖಿಲಸಾಮರ್ಥ್ಯವನು ತೋರಿಸುತ ॥
ಮೇವಿಗೆಳೆಸಿದಹೊಮ್ಮಿಗವೊ ಎಂ ।
ಬಾವಿಧದಿ ಮೋಹವನೆ ಪುಟ್ಟಿಸಿ ।
ಭೂವಲಯಕದ್ಭುತವ ತೋರುತ್ತೊಲಿಸು ಜಾನಕಿಯ ॥ ೫೩ ॥

ಬಳಿಕ ಮಿಕ್ಕಿನಕಾರ್ಯವೆಲ್ಲವು ।
ಸುಲಭವಾಗಿಯೆ ಸಿದ್ಧಿಸುವುದೈ ।
ಬಲುಹಿಸಿಂ ಕರವೆಳೆಯೆ ಕಾಯುವು ತಾನೆ ಬಪ್ಪುದಲಾ ॥
ಪಲವುಬಗೆಯುನು ಮನಕೆ ತಾರದೆ ।
ಚೆಲುವರೂವನು ಬೇಗ ತಾಳೆಂ ।
ಬುಲಿವು ಹಿಂಜೆಕು ಮುಂಜೆತಂತಹ ಪುಲ್ಲೆಯುಪವನಕೆ ॥೫೪॥

ಸುಳದುದದು ತಾನಿತ್ತಲತ್ತಲು ।
ಮೆಲೆವನೆಯು ಸರಿಸದಲಿ ತೋರುತ ।
ಕೆಲಕೆಸಾರುತ ಬಳಕಮುಗುಳ್ಯೆದುತ್ತ ನಿಲ್ಲುತಲಿ ॥
ಹಲವುಬಣ್ಣದೊಳ್ಯೆದೆರಂಜಿಸು ।
ತಲುಗದಕ್ಷಿಗಳಿಂದನೋಡುತ ।
ನಲಿಯುತೊಪ್ಪುವ ಸೊಬಗಬೀರಿತುಕನಕಮೃಗವಂದು ॥೫೫॥

ಎನುತತರುಗಳೊಳರಸಿ ಪುಷ್ಪವ ।
ಮನಕೆ ಬಂದುದ ತಿರಿದು ಮುಡಿಲಲಿ ।
ಜನಕನಾತ್ಮಜೆ ತುಂಬುತೆಲೆವನೆಯಿದಿರಿನುಪವನದೆ ।
ಮಿನುಗುತಿಹಕಾಂಚನಮಯಾಂಗದ ।
ಘನಮನೋಹರವಾದ ರೂಪಿಂ ।
ದನುಪಮಾನಮಿದೆನಿಪಮೃಗವನು ಕಂಡು ಮೋಹಿಸುತ ॥೫೬॥

ಎನಿದೆತ್ತಣಿನ್ನೆಂದಿತೆರಳೆಯು ।
ಕಾನನದ ಮೃಗಪೋತಕೀಪರಿ ।
ಕಾನಕಾಂಗಮಿದಮಮ ಸೋಜಗಮಲ್ತೆ ಪರಿಕಿಸಲು ॥
ನಾನಿದನು ಪಡೆಯುತ್ತೆ ವಿಪಿನ ।
ಗ್ಲಾನಿಯನು ಪರಿಹರಿಪೆನೆನುತಾ ।
ಮಾನಿನೀಮಣಿ ಸಡಗರದಿ ಪೊದ್ದಿದಳು ವಲ್ಲಭನ ॥೫೭॥

ಮೆಲ್ಲನೈತಂದಿದಿರೆ ನಿಂದಿಹ ।
ವಲ್ಲಭೆಯನೀಕ್ಷಿಸುತ ರಾಮನು ।
ಪಲ್ಲವಾಧರೆ ನಿನ್ನ ಬರವಿಂಗೇನುಕಾರಣವು ॥
ಇಲ್ಲದೇನುಂಬರಿದೆಬರ್ಪವ ।
ಳಲ್ಲ ನಿನ್ನಯ ಮನದಬಯಕೆಯ ।
ನಲ್ಲಳೇ ನೀಂನುಡಿಯೆ ನಡೆಸುವೆನೆಂದನಾರಘುಜ ॥೫೮॥

ಇನಿಯನೊರೆದಿನಿವಾತನಾಲಿಸಿ ।
ಘನಮನೋರಥಮಾಂತೆನೆನ್ನುತ ।
ವನಿತೆ ನುಡಿದಳು ಕಾಂತ ಕೇಳಂದೆಮ್ಮವನದೆಡೆಗೆ ॥
ಕನಕಮಯಮೆನೆ ಮೆರೆವತನುವಿನ ।
ವಿನುತಹರಿಣನದೊಂದುಬಂದಿಹು ।
ದೆನಗೆ ಮನದಭಿಲಾಷೆಯಿಹುದದನೊಂದಬೇಕೆಂದು ॥೫೯॥

ಎದ್ದು ನಡೆ ಬೇಗಿರದೆ ತೋರ್ಪೆನು ।
ಮುದ್ದುಮಿಗವನು ನಿನಗೆ ಮೆಲ್ಲನೆ ।
ಸದ್ದುದೋರದೆ ಬಪ್ಪುದೆನ್ನೊಡನೆನುತ ಕೈವಿಡಿದು ॥
ಉದ್ದುರುಳುವನಿತರೊಳಗಾವಿಗ ।
ವಿದ್ದತಾವನು ಸೇರಿ ರಮಣನೆ ।
ಕದ್ದುನನ್ನಯಮನವನಚ್ಚರಿಗೊಳಿಪಮಿಗವಿದೆಕೊ ॥೬೦॥

ಸದಯನಿನ್ನನುರಾಗರಸಕಾ ।
ಸ್ಪದವುನಾನಹುದಲ್ಲವೆಂಬುದ ।
ವಿವರಿಸರಿಯಲುಬಹುದು ನೀನಿಂದಿರದೆ ಸಾಹಸದೆ
ಚದುರತನವನು ತೋರಿ ಬಾಣದೆ ।
ಸದೆದು ನೋಯಿಸದಂತೆ ಪಿಡಿಯುತ ।
ಮುದದೆ ತಂದೆನಗೀಯೆ ಕಾಲವ ಕಳೆವೆನಿದರೊಡನೆ ॥೬೧

ಎಂದು ತನ್ನಯ ಮನದ ಕಾಂಕ್ಷೆಯ ।
ನಿಂದುಮುಖಿ ಬಿನ್ನೈಸಲಾರಘು ।
ನಂದನನು ಬಗೆ ತಣಿಯೆ ಮುದ್ದಿಸುತರಸಿ ಲಾಲಿಪುದು ॥
ಇಂದು ನಿನಗೀಬಣಗುಪುಲ್ಲೆಯ ।
ತಂದುಕೊಡೆ ಮತ್ಪ್ರೇಮಸಿಂಧುವ ।
ನೊಂದಿದಳತೆಯು ಪೂರ್ಣವಾಯಿತ್ತೆಂದು ಭಾವಿಪೆಯಾ ॥೬೨।

ಸುಂದರಾಂಗಿಯೆ ನನಗೆನಿನ್ನೊಳ ।
ಗೆಂದುಮಿರ್ಪೊಲ್ಮೆಯನುಪರಿಕಿಸೆ ।
ಬಂದೊಡಾಕಸ್ಮಿಕದೆ ನಿನಗೊಂದೆಡರುನಾನೊಂದನೆ ।
ಮಂದರಾದ್ರಿಯುನಾದೊಡಂಕೀ ।
ಳ್ತಂದುಜಲಧಿಯನಡುವೆಸಾಹಸ ।
ದಿಂದಸೇತುವನಾದೊಡಂಬಂಧಿಸುತಸಲಹುವೆನು ॥ ೬೩ ॥

ಆಗ ನೀಂ ಸಂತುಷ್ಟೆಯಾಗನು ।
ರಾಗದಾಳವದೆನ್ನೊಳಂತುಂಟೆ ।
ರಾಘವನೆ ನಾನರಿದುದಿಲ್ಲೆಂದೆನುತತಕ್ಕೈಸೆ ॥
ನಾಗವೇಣಿಯೆ ನನ್ನ ಜನುಮವ ।
ದಾಗ ಸಾಫಲ್ಯವನು ಪಡೆಯುಲು ।
ಭೋಗಿಶಯನನ ಪದವಿಯಾಂತನ ತೆರದಿ ಸುಖಿಸುವೆನು । ೬೪ ।

ಇರ್ದೊಡಿಲ್ಲಿಯೆ ರಮಣಿ ನೀಂ ನಿಮಿ ।
ಷಾರ್ಧದಲಿತಂದೀವೆನೆನ್ನುತ ।
ಸಾರ್ದುಲಕ್ಷ್ಮಣನೆಡೆಯನೆಲ್ಲವನವನೊಳದನರಿಪಿ ॥
ಪೊರ್ದಿತೆನಗೀವ್ಯಸನಮಾದೊಡ ।
ಮಿರ್ದು ಬಳಿಯೊಳು ಸೀತೆಯನು ಬಲು ।
ಬರ್ದಿನಿಂ ಕಾದಿಹುದು ನೀನೆಂದೆಚ್ಚರಿಸಲವನು । ೬೫ ।

ಏನಿದಚ್ಚರಿಯಣ್ಣ ನೀನಿದು ।
ಹೀನರಾಕ್ಷಸಮಾಯೆಯೆಂಬುದ ।
ನೇನುಮರಿಯದನಂತೆ ಭ್ರಾಂತಿಯನೊಂದಿ ಗಮಿಸುವುದು ॥
ಶ್ವಾನದೆಕ್ಕಲನೆರಳೆಯಂದವ ।
ನಾನುತಾಮಾಯಾವಿದನುಜವಿ ।
ತಾನವಾವಗಮಿಲ್ಲೆ ಚರಿಸುವುದೆಂದು ಕೇಳ್ದರಿಯ ॥೬೬॥

ಲೋಕದೊಳಗೀಪರಿಯಮೃಗವುವಿ
ಲೋಕಿಸುವೊಡಿಲ್ಲಾವದೆಸೆಯೊಳ ।
ಮೀಕುಟೀರದ ಬಳಿಯೊಳಂದುದ್ಭವಿಸಿದಂತಿಹುದು ॥
ಸೋಕಿ ಬೆರೆಯದೆ ಮಿಕ್ಕಮೃಗಗಳು ।
ನೂಕಿ ಬೆದರುತ ಚದರಿಪೋಪ್ರವು ।
ಸಾಕು ಸಾಕಿದನರಿಯಬಾರದೆ ದೇವಕವಡೆಂದು ॥ ॥೬೭॥

ತಮ್ಮ ನೀನಾಡಿದುದು ಸತ್ಯವು ।
ಸಮ್ಮತವು ತನಗಾದೊಡಂಕೇ ।
ಳೆಮ್ಮರಸಿ ಬಯಸಿದೊಡೆ ನಾನದಕೊಪ್ಪಿದೆನುಬಳಿಕ ।
ಸುಮ್ಮನೇ ಕಳುಕುವುದು ಕೇಳೀ ।
ಹೊಮ್ಮಿಗವು ನಿಜಮಲ್ಲಖಳನೆಂ ।
ದೊಮ್ಮೆ ತೋರ್ದೊಡೆ ಕಡಿದು ಬಿಸುಡುವೆನೇಕೆ ಸಂಶಯವು॥೬೮॥

ಅರಸಿಯಿಹಳೆಡೆವಿಡದೆ ಕಾಯ್ದಿರು ।
ಬರುವೆನತಿಶೀಘ್ರದಲಿ ತಾನೆಂ ।
ದರಸನಾಹರಿಣನನು ಬೆನ್ನಟ್ಟಲ್ಕೆ ಬಳಿಕಿರದೆ ।
ತರತರದ ನಟನೆಗಳ ತೋರು ।
ತ್ತಿರದೆ ಸಿಕ್ಕಿತುಸಿಕ್ಕಿತೆನಿಸುತೆ ।
ಭರದೆ ಮುಂದಕೆ ಜಿಮ್ಮಿ ನಿಲ್ಲುತ ನೋಡಿ ಪಿಂಗಡೆಗೆ ॥೬೯॥

ಬರುವನಿನ್ನೇಂ ಸರಿಸಕೆಂಬನಿ ।
ತರೊಳು ಜಾರುತ ಮರಳಿ ನಿಲ್ಲುತ ।
ಮರೆಯುದೀಪರಿಬವಣಿಗೊಳಗಾಗಿಸುತ ರಾಘವನ ॥
ಪರಿಪರಿಯ ಬಳಲಿಕೆಯುನೀಯು ।
ತ್ತಿರದೆ ವನದಿಂ ವನಕೆ ಸಾರುತ ।
ಭರದಿನೊಯ್ದುದು ನೃಪನ ದೂರದೊಳುಳದುದಾಶ್ರಮವು ॥೭೦॥

ಜಲಜಸಖವನಪದಾಬ್ಧಿಗಿಳವನು ।
ಹಲವುಪಾಯಗಳೆಲ್ಲ ತೀರ್ದುವು ।
ಹುಲುಮಿಗವು ಕೈಸೇರದಾಯುಸವಾಂತುದೆನ್ನೊಡಲು ।
ತಿಳಿಯಲಿದು ಸಾಮಾನ್ಯವಾಗಿರ ।
ದೆಲೆವನೆಯು ಬಹುದೂರವಾಯಿ ।
ತ್ತುಳಿದನಾಗಳೆ ತಮ್ಮ ತಾನಿದು ಕಪಟದ ಮೃಗವೆನುತ ॥೭೧॥

ಹಿರಿಯಮಕ್ಕಳು ಪುಷ್ಟಕಾಯರು |
ಕಿರಿಯವರು ಮೇಧಾವಿಗಳೆನು |
ತ್ತೊರೆವನಾಳ್ನುಡಿ ಸತ್ಯವಾದುದು ನಮ್ಮ ವಿಷಯದಲಿ ||
ಅರಿಯದಿರ್ದೈತಂದಬಳಿಕಿ |
ನ್ನಿರುವುದೇನೀಖೂಳಮಿಗವನು |
ತರಿದು ಚರ್ಮವ ಕೊಯ್ದುತನ್ನಯರಮಣಿಗಿತ್ತಪೆನು ||೨೨||

ಎನುತ ಧನುವಿಂಗಾಗ ಬಾಣವ |
ನನುಗೊಳಿಸುತೆಸೆಯಲ್ಕೆ ಹರಿಣನು
ದನುಜರೂಪದೆ ಲಕ್ಷ್ಮಣನೆ ಹಾ ಸೀತೆ ಹಾ ಎನುತ ||
ವನಮದೆಲ್ಲವು ಮೊಳಗುವಂದದೊ |
ಳನಕುಲೇಶನ ಕೊರಲದನಿಯನೆ |
ಅನುಕರಿಸಿ ಮಿಗೆ ಕೂಗುತಸುವನು ಬಿಟ್ಟುದಾಕ್ಷಣವೆ ||೨೩||

ದುಗುಡವಾಂತನು ರಾಮನಾಗಳು |
ವಿಗಡರಕ್ಕಸಮಾಯೆ ಬಲ್ಲಿತು |
ಪುಗದೆ ಬಿಡದೀನುಡಿಯು ಸೀತಾಲಕ್ಷ್ಮಣರ ಕಿವಿಗೆ ||
ಬಗೆಬಗೆಯ ಬಗೆಗಳನು ಕಲ್ಪಿಸಿ |
ಹಗರಣವನೇಂತಹರೊ ಕಾಣೆನು |
ಮಗುವಲಾ ಸೌಮಿತ್ರಿಯೆಂದಾರಾಮನಳುಕಿದನು ||೨೪||

ತಾಳಲಾರೆನು ಹರಣದೆರೆಯನು ।
ವೇಳೆಗಳೆವನದೇತಕರಿಯೆನು ।
ಖಾಳುಮೃಗದಿಂದೇನು ಬಿಸುಟದನೇಕೆ ಬಾರನೊ ಹಾ ॥
ಕಾಳುಮೂಳನೆ ಬಯಸೆ ಗದರಿಸಿ ।
ಪೇಳಲಾರದೆ ಬುದ್ಧಿಯನು ತನ।
ಗಾಳುಗೆಲಸಕೆ ತೆತ್ತುದೇಹವನೇಕೆ ದಣಿಸುವನೋ ॥ ॥೭೪॥

ಹರಿಣನಿಲ್ಲಿಗೆ ಬರಲದೇತಕೆ ।
ಯಿರದೆನಾನದಬಯಸಲೇತಕೆ ।
ತರುವೆನೆನುತಲಿ ತೆರಳಲೇತಕೆ ರಮಣನೇನಹನೊ ॥
ಅರಿಯದೊಂದುಮನಕೆರಮಣನ ।
ಬರವಿಗೇತಕೆ ತಡವೆನುತ್ತಾ ।
ತರುಣಿ ಮಿಗೆ ಚಿಂತಿಸುವಸಮಯಕೆ ಕೇಳ್ದುದಾದದನಿಯು ॥೭೬॥

ಬಿದ್ದುದೇನೀಗೆನ್ನಕಿವಿಯೊಳು ॥
ಸದ್ದು ರಾಮನದಾಗದಿರದಿದು ।
ಪದ್ದಿಪೋದುದೆ ಧರಣಿ ತಾನಕಟಬ್ಧಿಯೊಳಗಿಂದು ।
ಬಿದ್ದರೋಭೂಮಿಗೆಶಿವೀಂದುಗ ।
ಳುದ್ಧವಹಸುರಮಾರ್ಗದಿಂಮೇಣ್ ।
ಕದ್ದುದೋವಿಧಿತನ್ನಮಂಗಳಸೂತ್ರದೈಸಿರಿಯ ॥ ॥೭೭॥

ಏನಿದಿಂತಾಯ್ತೆಂದು ಮೈದುನ ।
ನೀನು ಕೇಳೆಯ ರಾಘವೇಶನ ।
ದೀನತಾಲಾಪವನು ಕೇಳಯುಮಿನ್ನು ಜೀವಿಪೆಯ ॥
ನಾನುಭೂಮಿಜೆಜಡತೆಯಾಂತವ ।
ಳೇನಬಲ್ಲೆನುಕಷ್ಟವನುಕೇಳ್ ।
ನೀನಭಿಜ್ಞತೆಯಾಂತವಾನವನಾಗಿಚಿಂತಿಸೆಯಾ ॥ ॥೭೮॥

ಪೋಗುಪೋಗೈ ಲಕ್ಷ್ಮಣನೆ ನಿನ ।
ಗೀಗವೇಳೆಯೆ ಯೋಚನೆಗೆ ನಡೆ ।
ಬೇಗನಿಲ್ಲದಿರಾರ್ಯಪುತ್ರಗೆ ಜೀವಸಂಶಯವು ॥
ಆಗುಹೋಗೇನೆಂಬುದರಿಯದೆ ।
ಬಾಗಿಸಿದಶಿರದಿಂದ ಮುಂಗಡೆ ।
ಕೈಗಳನು ಮುಗಿಯುತ್ತ ನಿಂದಿಹುದಕ್ಕೆ ಸಮಯವಿದೆ ॥೭೯॥

ಏನಿದೇಸೀನಡತೆ ತಕ್ಕುದೆ ।
ನಾನಳಲಿ ನಿಂದೊರಲುತಿರ್ದರು ।
ಹಾನಿಯಾನದವಾನವನ ತೆರದಿಂದ ವರ್ತಿಸುವೆ ॥
ಮಾನವೇ ನಿಮ್ಮಣ್ಣನಾಪದ ।
ವಾನುತಿರೆ ನಿನಗೆಚ್ಚಳವೆಘಡ ।
ನೀನುನಿಲ್ಲದೆತೊಲಗುತೊಲಗೆಂದುಲಿದಳಾಸೀತೆ ॥ ॥೮೦॥

ಕೇಳುತಾರ್ತಧ್ವನಿಯ ಲಕ್ಷ್ಮಣ ।
ನಾಲಿಯಲಿ ನೀರ್ದುಂಬಿ ಸಂಶಯ ।
ಜಾಲದಲಿಮನಸಿಲುಕಲೇನುಮನರಿಯದರೆಗಳಿಗೆ ॥
ಮೇಲೆ ನಿಶ್ಚೈಸುತ್ತ ರಾಕ್ಷಸ ।
ಜಾಲವಲ್ಲದೆ ಕಾಣೆ ಲಕ್ಷ್ಮೀ ।
ಲೋಲನಸುವಿಂಗುಂಟೆ ಕೊರತೆಯು ಸತ್ಯವೆಂದೆನುತ ॥೮೧॥

ಧರಣಿಜಾತೆಯ ನಿಷ್ಠುರೋಕ್ತಿಯ ।
ಸರಕುಗೈಯದೆ ದೇವಿ ಕೇಳ್ವುದು ।
ಸರಸಿರುಹಭವತಾತಗಳವುಂಟೆಂಬರೇ ತಾಯೆ ॥
ಧರಣಿ ಮೇಣೀಚಂದ್ರಸೂರ್ಯರು ।
ಮೆರೆವನಕ್ಷತ್ರಾದಿಗಳು ವಿಧಿ ।
ವಿರಚಿತಾಂಡವಿದೆಲ್ಲ ಲಯಿಸಿಯು ನಾಶವಿಲ್ಲವಗೆ ॥೮೨॥

ತಾಯೆ ನೀವೇ ರಮೆಯು ನಿಮ್ಮಯ ।
ನಾಯಕನೆ ಲಕ್ಷ್ಮೀಶನಿಂತಿರ ।
ಲಾಯಿತವೆ ನಿಮಗಿನಿತುಮರವೆಯು ದನುಜಮಾಯೆಯಿದು ॥
ರಾಯರಾಘವನನ್ನು ತೋರ್ಪೆನು ।
ನೋಯಲಾಗದು ಮನದೆ ನಿಖಿಲಾ ।
ಮ್ನಾಯಮೂರ್ತಿಯ ಕಾಂಬಿರಿಸ್ಸರಗಳಿಗೆಯೊಳಗೆನಲು ॥೮೩॥

ಅರಸನಳಲಿಂ ಕುದಿದು ಬೇಯುವ ।
ಪರಮಸಾಧ್ವಿಯು ಮನಕೆ ರುಚಿಪುದೆ ।
ಪೆರರು ಪೇಳುವನೀತಿವಚನವು ಕೇಳುತಾಕ್ಷಣದಿ ॥
ಕೆರಳಿದಳು ಲಲಿತಾಂಗಿ ನಿನ್ನಯ ।
ಪರಿಯೆ ಮತ್ತೊಂದಾಗಿ ತೋರ್ಪುದು ॥
ಪರಿದುದಾಮೊದಲಿದ್ದಭಕ್ತಿಯು ನಮ್ಮೊಳೆಲೊ ನಿನಗೆ ॥೮೪॥

ತರುಣಿಯನು ರಕ್ಷಿಸುವುದೆನುತೊರೆ ।
ದಿರಿಸಿ ಪೋಗಲು ನಿನ್ನನವನಿಪ ।
ನೆರಡನೆಣಿಸುವೆಯೇನೊ ಪಾಪಿಯೆ ನಿನ್ನ ಸುರೆಸುಡಲಿ ॥
ಹರಣದೆರೆಯಂಗೊದಗಲಾಪ ।
ತ್ತರಿದರಿದು ಜೀವಿಪೆನೆ ತಾನಿ ।
ನ್ನಿರಲುಮಾರೆನು ತೊರೆವೆನಸುವನೆನುತ್ತ ಸಡಗರಿಸಿ ॥೮೫॥

ಸೆರಗನೆಳೆದದನಾಗ ಹೊಸೆಯುತ ।
ಕೊರಳ ಸರಿಸಕೆ ಕೊಂಡುಪೋಗಲು ।
ಭರದೆ ಲಕ್ಷ್ಮಣ ಬೇಡಬೇಡೆಂದೆರಗಿ ಪದಯುಗಕೆ ॥
ದುರುಳದನುಜರು ನಿಮಗಪಾಯವ ।
ನಿರದೆ ಹವಣಿಪರಾನುಪೋಗಲು ।
ತೆರಳುವೆನು ತಾನಾದುದಾಗಲೆನುತ್ತ ಪೊರಮಡುತ ॥೮೬॥

ಶಿವಶಿವೇನಿಂತಾದುದೀಗಲು ।
ಭುವನಮಾತೆಯ ಬುದ್ಧಿಗಂಥತೆ ।
ಕವಿಯಿತೆನಲಿನ್ನುಳಿದಪೆಣ್ಗಳೆನೆಂದು ಫಲವೇನು ॥
ನವೆದನಿವನೆಮಗಾಗಿ ಯೆಂಬುದ ।
ಲವವನಾದರು ಮನಕೆ ತಾರದೆ ।
ಕಿವಿಗೆ ಸಲ್ಲದಮಾತನಾಡುತ್ತಿನ್ನನಟ್ಟಿದಳು ॥೮೭॥

ನಾರಿಯರು ಕಡುಮೂರ್ಖೆಯರೆನುತ ।
ಸಾರುತಿಪ್ಪುವು ನೀತಿವಚನಗ ।
ಳಾರಯಿದು ನೋಡಲ್ಕೆ ನುಡಿವುವು ಸತ್ಯವನೆ ತಾವು ॥
ದೂರದೃಷ್ಟಿಯೊಳಪ್ಪಸುಖವೇ ।
ಸಾರವೆಂಬುದನರಿಯದಾಕ್ಷಣ ।
ತೋರುತಡಗುವಸುಖವೆ ಸಾರವದೆನುತ ನಂಬುವರು ॥೮೮॥

ಆವವಂಶವೆ ಕೆಡಲಿ ತಮ್ಮಿಂ ।
ದಾವನುರುತರಕೀರ್ತಿಯುಳಿಯಲಿ ।
ತಾವದೇನಪದೆಸೆಯುನಾನಲಿ ಪಿಡಿದಚಲವನ್ನು ॥
ಆವುದೊಂದನು ನೋಡದಮಮಾ ।
ಭಾವಕೇಪರಿತೋರ್ದುದದೆ ಸಂ ।
ಭಾವಿತವು ತಾನೆಂದು ಸಾಧಿಪಯತ್ನಗೈದಪರು ॥೮೯॥

ಎಂದು ಲಕ್ಷ್ಮಣ ಮನದೆ ಯೋಚಿಸು ।
ತಂದು ಮುಂದಕೆ ನಡೆಯುತಲ್ಲಿಯೆ ।
ನಿಂದು ಪಿಂದಕೆ ತಿರುಗಿ ನೋಡುತ ಸುಯ್ದು ಸೀವರಿಸಿ ॥
ಬಂದುದೆಲ್ಲವು ಬರಲಿ ತಾಪಡೆ ।
ತಂದುದನು ಮತ್ತಾವನುಂಡಪ ।
ನೀದು ತಾನಿಲ್ಲಿಹುದು ಮತವಲ್ಲೆನುತ ತೆರಳಿದನು ॥೯೦॥

ಅತ್ತ ಲಕ್ಷ್ಮಣನಂತು ತೆರಳ ।
ಲ್ಕಿತ್ತ ರಾವಣನಿದುವೆ ಸಮಯವೆ ।
ಸುತ್ತೆ ಭೂಮಿಜೆಯಿರ್ಪಪರ್ಣಾಗಾರದೆಡೆಗೈದಿ ॥
ಚಿತ್ತಮಾವಳೊಳೀಸುದಿನ ನೆಲ ।
ಸಿತ್ತೊ ತಾನಾಸುಂದರಾಂಗಿಯು ।
ನೆತ್ತಿಮುದ್ದಿಟ್ಟೊತ್ತುತಾಲಿಂಗಿಸುವೆನೆಂದೆನುತ ॥೯೧॥

ಉಟ್ಟಕಾಷಾಯಾಂಬರದ ಪಣೆ ।
ಗಿಟ್ಟಸಿತಭಸಿತತ್ರಿಪುಂಡ್ರದ ।
ದಿಟ್ಟಿಯನು ಸೆರೆಗೈವಭಸ್ಮವ ಧರಿಸಿದವಯವದ ॥
ಜಟ್ಟಿಮುನಿಯಿವನಾವನೆಂಬವೊ ।
ಲಟ್ಟಹಾಸದೆ ಜಗ್ಗುವಡಿಗಳ ।
ನಿಟ್ಟು ರಾಮನ ಪಟ್ಟದರಸಿಯ ಮುಟ್ಟುವಾಸೆಯಲಿ ॥ ॥೯೨॥

ಬಂದು ಬಾಗಿಲಬಳಿಗೆ ನಿಂದವ |
ನೆಂದನಾರೌ ಗೃಹದೆ ಭಿಕ್ಷವ |
ತಂದು ನೀಡುವುದತಿಥಿಗೊಲಿದಪನಿಂದುಧರನಿಂದು ||
ಎಂದುನುಡಿವಾಕಪಟವೇಷಿಯು |
ನೆಂದು ರಕ್ಕಸನೆಂಬುದರಿಯದೆ |
ವಂದಿಸುತ್ತರ್ಘ್ಯಾದಿಸತ್ಕಾರಗಳನಿರದೆಸಗಿ || ||೯೩||

ಬಳಿಯೊಳವನತೆಯಾಗಿ ಕಾಂತನು |
ಬಳಿಯೊಳಿಲ್ಲದುದಕ್ಕೆ ಚಿಂತಿಸು |
ತಳುಕುತವನೈತರುವಮಾರ್ಗವ ಬಿಡದೆ ನೋಡುತಿಹ ||
ಲಲನೆಯನು ಕಾಣುತ್ತ ಮನುಮತ |
ನಲಗಿನಿಂ ಕಡುನೊಂದ ಹೃದಯದ |
ಖಳಶಿರೋಮಣಿಯಾಗ ಕೇಳಿದನಾಪತಿವ್ರತೆಯು || ||೯೪||

ಚೆಲುವೆ ನೀನಾರಾರ ಕುವರಿಯು |
ತಿಳಿಪದಾವನು ನಿನ್ನರಮಣನು |
ಬಲಸಮನ್ವಿತರಸುರರಿರ್ಪೆಡೆಗೇತಕೈದಿದಿರಿ ||
ಜಲಜಭವಸೃಷ್ಟಿಯಲಿ ಪಲಬರ |
ನಲಘುಲಾವಣ್ಯಾಂಗನೆಯರನು |
ಬಳಸಿ ಬಲ್ಲೆನು ಕಾಣೆ ನಿನ್ನಯರೂಪಿಗಿನ್ನೆಣೆಯು || ||೯೫||

ಮಾನಿನೀಮಣಿಯಿದನು ನಂಬೆನ ।
ಲೇನಿದಕಟವರಿಂತುನುಡಿವರ್ ।
ಧ್ಯಾನನಿಷ್ಠರಿಗೇಕೆ ಯುವತಿಯರಂದ ಚಂದಗಳು ॥
ಮಾನವೇಶನದೇಕೆ ಬಾರದೆ ।
ತಾನಿನಿತ್ತು ವಿಲಂಬವೆಸಗಿದ ।
ನೀನವೀನನ ಬರವು ಮನಕುರುಭಯವನಿತ್ತಪುದು ॥೯೬॥

ಕಾಲಹರಣವನೆಸಗುತಿರಲಾ ।
ಭೂಲಲಾಮರು ಬರುವರವರೀ ।
ಯಾಳನಾಟಕೆ ತಕ್ಕುಪಾಯುವ ತಾವೆ ಹವಣಿಪರು ॥
ಕೇಳದೀತನ ನುಡಿಗೆ ಮರುನುಡಿ ।
ವೇಳತೊಡಗುವೆನೀಗಳೆನುತಾ ।
ಲೋಲಲೋಚನೆಯಾಗಳೊರೆದಳು ತನ್ನ ಸಂಗತಿಯ ॥೯೭॥

ಯತಿಯೆ ಕೇಳೈ ನಾನು ಮೆರೆವಾ ।
ಮಿಥಿಲೆಯಾಣ್ಮನ ಜನಕಭೂಪನ ।
ಸುತೆಯು ತನ್ನನು ಕರೆದಪರು ಸೀತಾಭಿಧಾನದಲಿ ॥
ಕ್ಷಿತಿಪದಶರಥಸಾರ್ವಭೌಮನ ।
ಸುತನು ಸುಯಶೋನ್ವಿತನು ರಾಮನು ।
ಪತಿಯು ತನಗವನೆಸೆವಯೋಧ್ಯೆಯ ರಾಜ್ಯಭಾರವನು ॥೯೮॥

ಪಿತನ ಸತ್ಯೋದ್ಧಾರಕೋಸುಗ ।
ಜತೆಯೊಳುದಿಸಿದಭರತಗೊಲಿದಿ ।
ತ್ತತಿಭಯಂಕರವಿಪಿನದೊಳ್ಪದಿನಾಲ್ಕುವತ್ಸರವ ॥
ಹಿತದೆ ಕಳೆಯಲ್ಕಹಹ ಬಂದಿಹ ।
ನತಿಪರಾಕ್ರಮಶಾಲಿ ಸುಗುಣಾ ।
ನ್ವಿತನು ಸೋದರವರ್ಯಲಕ್ಷ್ಮಣಸಹಿತ ನನ್ನೊಡನೆ ॥೯೯॥

ಅರಸುರಾಮನು ಸುಪ್ರಸಿದ್ಧನು ।
ಪರಮಶಿಷ್ಟನು ಸತ್ಯಸಂಧನು ।
ಸರಸನತಿಶುಚಿ ಬಹುದಯಾಪರನುರುಗುಣಾರ್ಣವನು ॥
ಸುರನರೋರಗದನುಜರೊಗ್ಗಾ ।
ಗೆರೆಯುನೊಳ್ಪ್ರತಿಭಟಿಸಿ ನಿಲ್ಲಲು ।
ಧುರದೊಳವರರೆಗಳಗೆಯುಳಿಯುರು ಕೇಳು ಪೌರುಷವ ॥೧೦೦॥

ಧರಣಿಯೊಳಗಣ ಸಾರ್ವಭೌಮರ ।
ನೆರವಿ ಸೇರಿದುದಾಸ್ವಯಂವರ ।
ವರಮಹಾಮಂಟಪದೆ ತನ್ನನು ವರಿಸುವಾದಿನದೆ ॥
ಹರನ ಧನುವನು ಸೆಳೆದು ನಾರಿಯ ।
ಕೊರಲಿಗೇರಿಸಿ ಮೆರೆವನಾರಿಯ ।
ಕೊರಲಿಗನುಗೊಳಿಸುವುದು ತಾಳಿಯನೆನುತ ಮತ್ರಿತನು ॥೧೦೨॥

ಸಾರಲಿರದಾನ್ಯಪರು ಚಾಪಕೆ ।
ದೂಂದಿಂ ನಮಿಸುತ್ತ ಸಾಗದೆ ।
ಮೋರೆಗಳ ಜೋಲಿಡುತ ನಿಂದಿರೆ ಕಂಡು ರಾವಣನು ॥
ತೋರುವೆನು ಪೌರುಷವನೆನುತಲಿ ।
ಮೀರ ಬಗ್ಗಿಸೆಯೊದೆಯುಲದು ಕಾ ।
ಲ್ಜಾರಿ ಬೀಳಲ್ಕಗೆಯೊಳದ್ದುದು ನೆರೆದ ನೃಪನಿಕರ ॥೧೦೩॥

ಎದ್ದನಾಗೆನ್ನರಸರಾಮನು ।
ಸದ್ದು ನಿಂದುದು ರಾಜಸಭೆಯುಲಿ ।
ಹೊದ್ದಿದನು ಶಿವಧನುವನೆಡಗೈಯಿಂದ ಪಿಡಿವದನು ॥
ತಿದ್ದಿ ನಾರಿಯುನೊತ್ತಿ ಬಾಗಿಸೆ ।
ಬಿದ್ದುದಿಳೆಗೆರಡಾಗಿ ಮುರಿದಂ ।
ದಿದ್ದರೆಲ್ಲರು ಪಟದಬೊಂಬೆಗಳಂತೆ ಬೆರಗಿನಲಿ ॥೧೦೪॥

ಇಸಿತುಸತ್ವದೆ ಮೆರೆವಕಾಂತನ ।
ಘನಪರಾಕ್ರಮವರಿಯದಿಲ್ಲಿಯು ।
ದನುಜರಿದಿರಿಸಿ ಹರಣವಿತ್ತರಮೋಘಶರಗಳಿಗೆ ॥
ವಿನಯಿ ನೀನಾರಿತ್ತಬರವೇ ।
ನೆನಗೆ ಪೇಳುವುದೆನುತಲುಸುರುವ ।
ವನಿತೆಯಾನುಡಿಗೇಳಿ ರಾವಣನಾಗ ನಗುತೆಂದ ॥೧೦೫॥

ಹೇಳತೊಡಗಲೊ ತನ್ನಚರಿತೆಯ |
ಕೇಳುತದ ನೀಂ ಸುಮ್ಮನಿರ್ದೆಯ |
ಕಾಳುಮನುಜನ ರಾಮನೆಂಬನ ಕೂಟ ಬೇಡೆನೆಯ ||
ಪಾಳುಮನೆಯೊಳಗುರಿವದೀಪದ |
ವೋಲು ನಿನ್ನೀರೂಪು ವಿಫಲವು |
ಬಾಲೆ ನಿನಗನುರೂಪನೇನಾಮಾನವಾಧಮನು ||೧೦೬||

ದೇವದಾನವಯಕ್ಷಕಿನ್ನರ |
ರಾವಗಂ ನೆರೆ ಸೇವಿಸುತ್ತಿಹ |
ರಾವನಂ ತಾನಾವನಮರಾವತಿಯನೇಳಿಸುವ ||
ಠೀವಿಯಿಂ ರಾಜಿಸುವಲಂಕೆಗೆ |
ದೇವನೆನಿಪನೊ ಮೂರುಲೋಕವ |
ಕಾವನಾದಿತಿಜಪತಿಯೀಯತಿಯೆನುತ ತಿಳಿ ಯುವತಿ ||೧೦೭||

ತನ್ನ ನಾಮವ ಕೇಳದೊಡನೆಯೆ |
ಖಿನ್ನರಪ್ಪರು ದಿಕ್ಪತಿಗಳೆನ |
ಲಿನ್ನುಳಿದಹಾಹೆಗಳ ಪಾಡೇಂ ತೆಗೆ ನರಾಧಮರ ||
ಮುನ್ನ ಗೈದಿಹತಪದ ಫಲದಿಂ |
ದೆನ್ನರಾಣಿಯರೆನಿಸಿ ಲೋಕದ |
ಮನ್ನಣೆಗೆ ಗುರಿಯೆನಿಸಿಕೊಂಡರು ಹಲವುಕನ್ನೆಯರು ||೧೦೮||

ಇಲ್ಲ ಕೇಳ್ಸರಿ ತನ್ನವೈಭವ ।
ಕಿಲ್ಲಪಾಸಟಿ ಬಾಹುಬಲಕಿ ।
ನ್ನಿಲ್ಲವಿಂದೆನ್ನಾಜ್ಞೆಗುಲ್ಲಂಘನೆಯು ಮೂಜಗದೆ ॥
ಬಲ್ಲತನಕೆಣೆಯಿಲ್ಲವಿದ್ಯೆಗ ।
ಳೆಲ್ಲವಡಗಿಹುವೆನ್ನಮೊಗದೊಳೆ ।
ನಲ್ಲಳೇ ನೀನಿನ್ನು ಮನವೊಲಿದೆನ್ನ ವರಿಸುವುದು ॥೧೦೯॥

ಅರಸಿಯರ ತನ್ನವರ ನಿನ್ನಯ ।
ಪರಿಚರಿಯಕಿರಿಸುವೆನು ಕೇಳೆ ।
ನ್ನರಮನೆಯುಮೆನ್ನೈಸಿರಿಯು ನಿನ್ನದು ವಿಚಾರಿಸಲು ॥
ಹಿರಿಯಮಗನೆನಿಸಿದೊಡಮವನಿಯ ।
ಸಿರಿಯನೀಯದೆ ಜನಕನಟ್ಟಲು ।
ಗಿರಿವನಂಗಳ ಸೇರಿ ಜೀವಿಪ ತಿರುಕನಲೆ ರಾಮ ॥೧೧೦॥

ಹರಿತವಾದಲಗುಗಳು ನಾಂಟದ ।
ಪರುಷವಾಗಿಹಹೃದಯವಿದು ಸುಮ ।
ಶರಕೆ ಪಕ್ಕಾದುದನು ನೋಡಲು ನಿನ್ನಮಹಿಮೆ ಕಣಾ ॥
ವಿರಹದಾವಾನಲನ ಪೆರ್ಚಿಸಿ ।
ಕರಗಿಸುತಲೆನ್ನೆದೆಯ ನೀರೆನ ।
ಲರಲ ಸರಳಿಂಗೆಡೆಯ ಮಾಡಿದೆಯಲ್ತೆ ನೀನಿಂದು ॥೧೧೧॥

ಎಂದು ನುಡಿವಾದಶಮುಖನ ಪೂ ।
ರ್ಣೇಂದುಮುಖಿ ನೋಡುತ್ತ ಭೀತಿಯ ।
ನೊಂದಿ ಮನದಲಿ ಬೆಚ್ಚಿ ಬೆದರುತ ನಡುಗಿ ಕಳವಳಿಸಿ ॥
ಮುಂದೆ ಯುಗಲಿದಪ್ಪಲ್ಲೆ ಬಲೆಯೊಳ ।
ಗೊಂದೆ ಸಿಲುಕುತ ಹೊಲಬುಗಾಣದೆ ।
ನೊಂದು ನಾನಾದೆಸೆಯನೀಕ್ಷಿಪಚಂದದಿಂದಿರದೆ ॥೧೧೨॥

ಹಿಂದೆಮುಂದಿಕ್ಕೆಲವ ನೋಡಿದ ।
ಳಂದು ಕಾಣದೆ ಜನದ ಸುಳಿವನು ।
ಬೆಂದಬಿದಿಯನು ಬೈದುಜೀರ್ದಳು ಗತಿಯದೇನೆನುತ ॥
ಇಂದದೇತಕೆ ಸಂಜೆಯಾದರು ।
ಬಂದು ಮನೆಯನು ಸೇರದಿರ್ಪರು ।
ಸುಂದರಾಂಗರು ರಾಮಲಕ್ಷ್ಮಣರೆಂದು ಹಲುಬಿದಳು ॥೧೧೩॥

ಬಳಿಕ ಚಿಂತಿಸಿ ಫಲವದೇನೆಂ ।
ದಳುಕದೆಂದಳು ಕೇಳು ನೀಚನೆ ।
ಕುಲಸ ರಾಪ್ತಿ ಮನೆಳಸಿ ಬಂದೆಯ ಖುಲ್ಲರಾವಣನೆ ॥
ಅಲಘುಶೌರ್ಯನೆನುತ್ತ ನಿರ್ಜನ ।
ನಿಳಯದಲಿ ದಂಭವನು ತೋರುವೆ ।
ಗಳಗೆ ತಾಳದೊಡಾಗ ಕಾಣಲುಬಹುದು ಪೌರುಷವ ॥೧೧೪॥

ಆರು ತಾನೆಂಬುದನು ತಿಳಿಯದೆ ।
ವೀರಿ ತುಟಿಗಳ ಮಾತನಾಡುವೆ ।
ಧೀರ ಗುಣಗಂಭೀರ ರಾಘುವನರಸಿ ನಾನಹೆನು ॥
ಮೇರುವಂದದೊಳಚಲನಬ್ಧಿವೊ ।
ಆರಿಗಂ ತಡೆಯಲ್ಕಶಕ್ಯನ ।
ಪಾರಶೌರ್‍ಯನು ರಾಮನಾತನರಾಣಿ ನಾನಹೆನು ॥೧೧೫॥

ಸರ್ವಲಕ್ಷಣಸಂಪದನ್ವಿತ ।
ನುರ್ವಿಯಂದದಿ ಸಹನಶಾಲಿಯು ।
ಖರ್ವಭುಜಬಲನೆನಿಪರಘುಜನ ಪತ್ನಿ ನಾನಹೆನು ॥
ಸರ್ವಧರ್ಮವಿನಾಶರೆನಿಸುತ ।
ಉರ್ವಿ ಕೊರ್ವಿದದುಷ್ಟದನುಜರ ।
ಗರ್ವಗಿರಿಪವಿದಾಶರಥಿಯಾ ಮಡದಿ ನಾನಹೆನು ॥೧೧೬॥

ಹರಿಯು ಬುಂಜಿಪವಸ್ತುವನು ಹುಲು ।
ನರಿಯು ಬಯಸುತೆ ಬದುಕಬಲ್ಲುದೆ ।
ಕರಿಯಭುಜಗನ ಸರಸಕೆಳಸಿದನರನು ಜೀವಿಪನೆ ॥
ಉರಿವಬೆಂಕಿಯನುಟ್ಟಬಟ್ಟೆಯೊ ।
ಳರುಕಿಸುವೆನೆಂಬಾತನುಳವನೆ ।
ಧರೆಯಮೇಲಿನ್ನಿರವೆ ರಾಮನ ಸತಿಯನಳಪಿದಗೆ ॥೧೧೭॥

ಶರಧಿಗೆಣೆಯೇ ಕಾಲುವೆಯು ಮದ ।
ಕರಿಗೆ ಸಾಟಿಯೆ ಸೂಕರನು ಮೇಣ್ ।
ಗರುಡನಿಗೆ ವಾಯುಸವೆಣೆಯೆ ಕನಕಕ್ಕೆ ಕಬ್ಬಿಣವೆ ॥
ಸುರಪನಿದಿರೊಳು ಹುಲುಕಿರಾತನೆ ।
ಹರಿಗೆ ಸಮನೇ ಜಂಬುಕನು ನರ ।
ವರಗೆ ರಾಮಂಗಿದಿರೆ ಖಳನೀನೆಂದಳಾಸಾಧ್ವಿ ॥೧೧೮॥

ವ್ರತದ ಜಪತಪದತುಲಫಲಗಳು ।
ಪತಿಯ ಸೇವಾಮಾತ್ರದಿಂ ನಿಜ ।
ಸತಿಗೆ ದೊರೆವುವು ಮೇಲೆ ಸದ್ಗತಿಕರತಲಾಮಲಕ ॥
ಕ್ಷಿತಿಯೊಳದನಾಚರಿಸುತಿರ್ಪೆನ ।
ಗಿತರವಿಷ್ರ್ರದೆ ರಾಮನಲ್ಲದೆ ।
ಗತಿಮನೋವಾಕ್ಕಾಯಸಾಕ್ಷಿಯೊಳವನ ನಂಬಿಹೆನು ।೧೧೯।

ಸಿರಿಯ ಸೊಬಗನು ಪೋಲ್ವಸೊಬಗ್ಗೆ ।
ಸಿರಿಯು ಧನದನಭಾಗ್ಯಕಿಮ್ಮಡಿ ।
ಕರೆದೊಡಾಗಳೆ ಸಾಸಿರಾಳ್ಗಳು ಹೈಹಸಾದೆನುತ ।
ಕರವ ಜೋಡಿಸಿ ಸೇವಿಪುದು ಮೇಣ್ ।
ಹರಣದೆರೆಯನ ಚರಣಸೇವಾ ।
ಪರಮಸಾಮ್ರಾಜ್ಯಾಭಿಷೇಕೋತ್ಸವಕೆಸರಿವಹವೆ ॥೧೨೦॥

ಶೀಲವತಿಯುಹಸತಿಯು ನಿಜಪತಿ ।
ಯೂಳಿಗದೆ ದೇಹವನು ತೇಯುತೆ ।
ಕಾಲಕಾಲದೊಳೊಪ್ಪುವುಪಚಾರಗಳನೊಲಿದೆಸಗಿ ॥
ಜಾಲಗೆಯ್ಯದೆ ಸಕಲಕಾರ್ಯದೊ ।
ಳಾಳಿಯಂದದೆ ನಡೆಯೆ ಸಾಧ್ವೀ ।
ಮಾಳಯೆನಿಸುತಲಿಹಪರಂಗಳ ಸೂರೆಗೊಂಬುವಳು ॥೧೨೧॥

ಭಂಡದನುಜಾಧಮನೆ ನಿನ್ನಯ ।
ಗುಂಡಿಗೆಯನಿರದಿರಿವಸುಭಟರ ।
ಗಂಡ ರಿಪುಭೇರುಂಡ ರಘುಜೋದ್ದಂಡನೈತಹನು ॥
ದಿಂಡುದರಿಯುತ ನಿನ್ನಕೊಬ್ಬಿದ ।
ಖಂಡವನು ನೆರೆಕಿತ್ತು ರಕುತವ ।
ಕೊಂಡು ಭೂತಂಗಳನು ತಣಿಸುವಭೂಪನೈತಹನು ॥೧೨೨॥

ದುರುಳ ನಿನ್ನೊಡಹುಟ್ಟಿದವಳಿಗೆ ।
ಮರೆಯದಂದದ ಗುರುತನೆಸಗುತ ।
ಖರನ ಸಂಹರಿಸಿರ್ದದಾನವಕಾಲನೈತಹನು ॥
ಧರೆಯ ಭಾರವ ತಗ್ಗಿಸುವೆನೆಂ ।
ದುರುವಭಾಷೆಯನಿತ್ತು ಮುನಿಜನ ।
ಕಿರದೆ ಕಾರ್ಯೋದ್ಯುಕ್ತನಾಗಿಹ ದೇವನೈತಹನು ॥೧೨೩॥

ಪೆರರ ಸತಿಯರಿಗಳುಪಿದಧಮನ ।
ಭರದಿನೊಯ್ವರು ಯಮನ ಕಿಂಕರ ।
ರುರುಳಸುವರಾಘೋರಕುಂಭೀಪಾಕನರಕದಲಿ ॥
ಅರಿಚಲಯ್ಯೋಎಂಬರಿಲ್ಲವು ।
ಸರಿಯಲತ್ತಿತ್ತಿರಿದು ಶೂಲದೊ ।
ಳುರಿಗೆ ನೂಕುವರರಿಯ ನೀನಿದನೆಂದಳಿಂದುಮುಖಿ ॥ ೧೭೪ ॥

ನುಡಿಯುತಿಂತನಿಜೆಯು ಮತ್ತೊಡ ।
ನೊಡೆಯನೈತಹದೆಸೆಯ ನೋಡುತ ।
ಸಡಿಲವಾಗಲು ಮನದಭಯಕೆಯು ಕೂಡೆ ಕಡುಜೆದರಿ ॥
ಮಡದಿಮಣಿ ಕಂಗೆಡುತ ಬಿಸುಸು ।
ಯ್ದೆಡೆಯ ಕಂಭವನೊರಗೆ ಕಾಣುತ ।
ತಡೆದೊಡೆನ್ನಯ ಕಾರ್ಯ ಕೆಡುವುದೆನುತ್ತ ರಾವಣನು ॥ ೧೭೫ ॥

ಎಲೆಗೆ ನಿನ್ನಸು ವರಿಸುವುದಕಾ ।
ಹಲವುಜಡೋಹವ ಧರಿಸಿ ಬಂದವ ।
ರೊಳಗದಾವನೊ ನನ್ನವೇಷವ ನೊಂದುತ್ತೈತಂದು ॥
ಫಲವನೊಂದದೆ ಪೋದವಮಾತ್ರದೆ ।
ನೆಲದೊಳಗ್ಗಳನೆನಿಪರಾವಣ ।
ನಳುಕಿದನು ಧನುವೆತ್ತಲೆಂಬೆಯ ನೋಡು ನೀನವನ ॥ ೧೭೬ ॥

ಹತ್ತು ತಲೆಗಳು ತೋಳ್ಗಳಿಪ್ಪ ।
ತ್ತೆತ್ತಣದ್ಭುತಕಾಯವೀತನ ।
ನೆತ್ತಿಗೆಣ್ಣೆಯನೆತ್ತಣಿಂ ತಂದೊತ್ತಿದಳೊ ತಾಯಿ ॥
ಎತ್ತಿದಾತೋಳ್ಬೀಳದಾಗದೆ ।
ತೊತ್ತುಗಳ ಸಂದಣಿಯು ದಣಿಯದೆ ।
ಹೆತ್ತವರಿಗುಬ್ಬಸವನೀಯದೆ ಬೆಳೆದುದೇಂ ಶಿಶುವು ॥೧೦೭॥

ಎಂದುನೋಡಿದಜನದ ಕಣ್ಮನ ।
ಕೊಂದಿಸುತ ವಿಸ್ಮಯವ ಕಾರ್ಮುಗಿ ।
ಲೊಂದದೇಕಿಳೆಗಿಳದುದೆಂಬಂತೆಸೆಯುತಿದಿರಿನಲಿ ॥
ಸುಂದರಾಂಗಿಯನೊಲಿಸಲಿದು ತ ।
ಕ್ಕಂದವಾಗಿಹುದೆನುತ ಗರ್ವಿಸಿ ।
ಮಂದಮತಿಯೊಲವಿಂದೆ ನಿಂದಿರೆ ಸೀತೆ ಬೆದರಿದಳು ॥೧೦೮॥

ಮುಗುದೆ ನೋಡೀಗೆನ್ನ ಚೆಲುವನು ।
ಬಗೆಗಿದೊಪ್ಪಿತೆ ಪೇಳು ನಿಜವನು ।
ಬೊಗಸೆಗಣ್ಗಳ ತೃಷೆಯ ಕಳೆದುಕೊ ನೋಡಿ ಮನತಣಿಯೆ ॥
ಪುಗುತಲಳಕಾವತಿಯ ಮುಕ್ಕರ ।
ಹಗರಣಂಗೊಳಸುತೆ ಕುಬೇರನ ।
ಗಗನಯಾನವನಾವಿಮಾನವ ತಂದಭಟನಾನೆ ॥ ॥೧೦೯॥

ಹಲವುಪರಿಯೊಳು ಶಿವನ ಭಜಿಸು |
ತ್ತೊಲಿಯದಿರಲವನಾಗ ಕೆರಳು |
ತ್ತಲುಗಿಸಿದೆನಾರಜತಗಿರಿಯನು ತೋಳಬಲುಹಿಂದೆ ||
ಅಳುಕಿದಳು ಪಾರ್ವತಿಯು ಬಳಿಕಾ |
ನೆಳಸಿದಿಷ್ಟವನೆಲ್ಲ ಪಶುಪತಿ |
ಸಲಿಸದನು ನೀಂ ಕೇಳ್ವುದಿಲ್ಲವೆಎಂದು ಖಲನೊರೆದು ||೧೩೦||

ಧರೆಯು ಬಿರಿದತ್ತೆಂಬೊಲದನೊದೆ |
ದಿರದೆ ಝುಂಕಿಸಿ ಕರವನೀಡುತ |
ಧರಣಿಜೆಯ ಸಿರಿಮುಡಿಗೆ ಹಾಯ್ದನು ಘೋರದಾನವನು ||
ಸುರರು ನಭದಲಿ ಬೇಡಬೇಡೆಂ |
ದಿರದೆ ಕೂಗಲುಗಣನೆಗೆಯ್ಯದೆ |
ಪರಿಮಳದೆಮಗಮಗಿಪಜಡೆಯನು ಬಿಡದೆತುಡುಕಿದನು ||೧೩೧||

ಭೂಮಿದೇವಿಯ ಗರ್ಭಕೋಶದೊ |
ಳೀಮಹಾಸತಿಯಿರ್ದಕಾಲದೆ |
ಕೋಮಲತೆವಡೆದಿವಳಕಚಭರಕಿಲ್ಲದಿಹಕೊರತೆ ||
ಕಾಮುಕನ ಕಡುಮೂರ್ಖದನುಜನ |
ವಾಮಕರದಾಂಕಿನಲಿ ನೊಂದುದೆ |
ಹಾಮಹಾದೇವೆನುತ ಜೇರ್ದುದು ಮೇಲೆ ಸುರಕಟಕ ||೧೩೨||

ಜಡಿದು ಮುಡಿಯನು ಸೆಳೆದು ಕೈನೆಯ ।
ನಡೆ ಭರದೆ ನಡೆಯೆಂದು ಗರ್ಜಿಸು ।
ತೊಡನೆ ತಂದನು ಕುಕ್ಕರಿಸಿದನು ತನ್ನರಥದೊಳಗೆ ॥
ಬಡಲಕೊಂಕಿನ ನಡುಗುವಂಗದ ।
ದಡದಡಿಸುತಿಹ ಮನದ ಮಾನಿನಿ ।
ಕಡುಬಡವೆಯಾತೆಂದಿನಿದ್ದಳು ರಾಮರಾಮೆನುತ ॥ ॥೧೩೩॥

ಮೂರನೆಯಸಂಧಿ ಸಂಪೂರ್ಣಂ.

೪ನೆಯ ಸಂಧಿ.

ಸೂ॥ ಭರದೆ ತಡೆದ ಜಟಾಯುವನು ಸಲೆ ।
ತರಿದು ರಾವಣನೈದಿ ಲಂಕೆಯೊ ।
ಳಿರಿಸಿದನು ಸೀತೆಯನಶೋಕೋದ್ಯಾನಮಧ್ಯದಲಿ ॥

ಎತ್ತಲಿಪೆಯೊ ರಮಣ ನೀನಿಂ ।
ದೆತ್ತಲಿಪ್ಪೆಯೊ ಲಕ್ಷ್ಮಣನೆ ಖಳ ।
ನಿತ್ತಲೆನ್ನನು ಪಿಡಿಯುತೊಯ್ವನು ನೀವದೆಲ್ಲಿಹಿರಿ ॥
ಒತ್ತಿದುದು ಮುಳ್ಳೆನ್ನಚರಣಕೆ ।
ನುತ್ತಲಾನಿರಲೆನಿತೊ ಮರುಗುತ ।
ಸುತ್ತಿಕೊಂಡುಪಚಾರವೆಸಗುವ ಹಿತರದೆಲ್ಲಿಹಿರಿ ॥೧॥

ಹೆತ್ತ ತಾಯ್ತಂದೆಗಳು ಸಟೆ ನೀ ।
ಸುತ್ತವೋತ್ತಮನೆನುತ ನಿನ್ನನೆ ।
ಹತ್ತಿಕೊಂಡಿಹಳಲ್ಲಪೇಕ್ಷೆಯೆ ದೇವ ರಾಘವನೇ ॥
ಮಿತ್ತುವಿನ ಬಾಯುದ್ದತ್ತದಾಗಿಹ ।
ಮತ್ತಕಾಶಿನಿಯನ್ನುಬಿಡಿಸಲು ।
ಮತ್ತದಾವಂಗಳವು ಪುರುಷೋತ್ತಮನೆ ನೀಂ ಬಿಡಿಸಾ ॥೨॥

ಕೊಂಡುಪೋಪನು ಲಂಕೆಗೆನ್ನನು ।
ಚಂಡದನುಜನು ರಾವಣನು ಕಡಿ ।
ಕಂಡವೆಸಗುತ್ತಿವನ ನೆನ್ನನದೇಕೆ ಬಿಡಿಸದಿಹೆ ॥
ಭಂಡನಿವನೇಂ ನಿನಗಸಾಧ್ಯನೆ ।
ಖಂಡಪರಶುವಿನಾ ಮಹಾಧನು ।
ಗಂಡುಗೆಡದೇ ನಿನ್ನ ವಿಕ್ರಮಚಂಡಮಾರುತಕೆ ॥೩॥

ತಂದೆತಾಯ್ಗಳನುಜ್ಞೆವಡೆಯದೆ ।
ಸಂದಮಾವನ ಬುದ್ಧಿಗೇಳದೆ ।
ಚಂದವಲ್ಲೆಂಬತ್ತೆನಾದಿನಿಯರನು ಮೀರುತಲಿ ॥
ಬಂಧುಗಳ ಕಡೆಗಣಿಸಿ ಬೇಡಕ ।
ಟೆಂದ ಪೌರರನೆಲ್ಲ ಧಿಕ್ಕರಿ ।
ಸಿಂದು ನಿನ್ನನೆ ನಂಬಿಬಂದೀತರಳೆಗೀವಿಧಿಯೆ ॥೪॥

ಅಂದು ನೀನೆಂದುದನು ಕೇಳದೆ ।
ಬಂದುದಕ್ಕೆನಗಿನಿತು ಶಿಕ್ಷೆಯೆ ।
ಕುಂದು ನಿನ್ನಯ ಕುಲಕಿದೆಂಬುದನಿಂದು ಮರೆದಪೆಯಾ ॥
ಸುಂದರಾಂಗನೆ ನಿನ್ನ ಸುದತಿಯು ।
ನೊಂದಳೈ ಬಲು ಬೆಂದಳೈ ನೀಂ ।
ಬಂದು ಬಿಡಿಸಾ ಸೆರೆಯನೆಂದೇಣಾಕ್ಷಿಯೊರಲಿದಳು ॥೫॥

ಬಾರೊಬಾರೋ ರಮಣ ನಿನ್ನೀ ।
ನಾರಿಯನು ಬಲುಹಿಂದೆ ದುರುಳನು ।
ಚೋರನಂದದೊಳೆಳೆದುಕೊಂಡೊಯ್ದಪನು ಪರಿಭವಿಸಿ ॥
ವಾರಿ ಭೂಮಿಯ ಕಡಲನಿವ ತಾಂ ।
ಸೇರುವನಿತರೊಳೆನ್ನ ಬಿಡಿಸೈ ।
ಸಾರಸಾಕ್ಷನೆ ಬಳಿಕ ತೃಣವೇ ಬೆಟ್ಟವಪ್ಪುದಲಾ ॥೬॥

ರಾಮ ರಕ್ಷಿಸು ಸಕಲಜಗದಭಿ ।
ರಾಮ ರಕ್ಷಿಸು ವೈರಿವಂಶವಿ ।
ರಾಮ ರಕ್ಷಿಸು ರಕ್ಷಿಸಕಟಾ ಈ ಯನಾಥೆಯನು ॥
ಪ್ರೇಮದಿಂದೊಡಗೂಡಿ ನಿನ್ನಯ ।
ನಾಮಮಾತ್ರವ ಭಜಿಸಲದು ಸು ।
ತ್ರಾಮಪದವಿಯ ಸೂರೆಗುಡುವುದೆನಿಪ್ಪನುಡಿ ಪುಸಿಯೆ ॥೭॥

ಗೇವ ನಿನ್ನಯ ಪಾದಪೂಜೆಯ |
ಭಾವಿಸಲ್ತನಗಖಿಲಮೆಂದೇ |
ಸೇವಿಸುತ್ತಿಹಮಡದಿಯೊಳಗಿಂತೇಕೆ ಖತಿ ನಿನಗೆ ||
ಜೀವಿತೇಶನೆ ಬೇಗನೈದೀ |
ಗಾವಿಲನ ಕಯ್ಯಿಂದ ಬಿಡಿಸೈ |
ಕಾವನೇನೀಂ ಕಾಯದಿರಲಿನ್ನಾರು ಕಾವವರು ||೮||

ಎಲೆಲೆ ವನದಭಿಮಾನದೇವತೆ |
ಗಳಿರ ನಿಮಗಿದೊ ಕರವಮುಗಿವೆನು |
ಬಲುಹಿನಿಂ ರಾವಣನು ನಿನ್ನಯ ಮಡದಿ ಸೀತೆಯನು ||
ಪಲತೆರದಿ ಬೇಡಿದೊಡಮೋವದೆ |
ಕಳವಿನಿಂ ಸೆಳೆದೊಯ್ದನೆನುತಾ |
ಯಿಳೆಯರಮಣಂಗೊರೆವುದೌ ನೀವಲ್ತೆಗತಿ ತನಗೆ ||೯||

ವನದವೃಕ್ಷಂಗಳಿರ ನೀವೆ |
ನ್ನಿನಿಯನೈತರಲವನೊಳೊರೆವುದು |
ತನಗೆಸಾಜಮೆನಿಪ್ಪಶಕ್ತಿಯದಿರುವಪರಿಯಂತ ||
ದನುಜನಿಗೆ ವಶೆಯಾಗೆನೆಂದದು |
ಕೊನೆಯನೈದುವವೇಳೆ ಸಮನಿಸೆ |
ತನುವನೀಗುವೆನೆಂದುಮರಿಕೆಯಗೈದಳವಳೆನುತ ||೧೦||

ಅನಿತರೊಳು ನೀಂ ಒಂದು ಬಿಡಿಸುವು ।
ದೇಶಿಸಲಾಗದು ಬೇರೆಪರಿಯನು ।
ಜನಕರಾಜರ್ಷಿಯೊಳು ಜನಿಸಿದಳೆನಿಸಿಕೊಳುತಿಹೆನು ॥
ಮನದೆಸಂಶಯಕೆಡೆಯಿಸಿತ್ತೊಡೆ ।
ಮನುಕುಲೇಶನೆ ಸತ್ವಗುಂದುತ ।
ಉಣುವ ಘನವಾಗೆಣಿಸಿ ಮಾಳ್ಪುದನುಳಿವೆ ಬೇಸರದೆ ॥೧೧॥

ತನ್ನ ಪಾತಿವ್ರತ್ಯವಹ್ನಿಗೆ ।
ನಿನ್ನಸಾಹಸವೆಂಬವಾರುತ ।
ನನ್ನ ಸೇರಿಸಿ ದಹಿಸು ದಾನವವಂಶಕಾನನವ ॥
ಗನ್ನಗತಕವಿದಲ್ಲ ನಂಬುವು ।
ದೆನ್ನನುಡಿಗಳನೆನುತ ಸೀತೆಯು ।
ಬಿನ್ನವಿಸಿದಳು ಕರವಜೋಡಿಸುತೆನ್ನಿವುತ್ಪತಿಗೆ ॥೧೨॥

ಇಂತು ಹಲವಂಗದಲಿ ಹಲುಬುತ ।
ಕಾಂತನಾನುಸ್ಮರಣೆಮಾಡುವ ।
ಕಾಂತೆಯನುಕೊಂಡಂತರಿಕ್ಷದೆ ಪೋಪರಾವಣನ ॥
ಮುಂತೆವೃಕ್ಷದತುದಿಯೊಳಿದ್ದ ಸ ।
ಮಂತು ನಿಟ್ಟಿಸುತಾಜಟಾಯುವು ।
ಜೇಂತೆಯೊಂದುತಲಾಗ ತಡೆದನು ನುಡಿಸಿದನು ಖಳನ ॥೧೩॥

ಏನಿದಕ್ಕಟ ವಿಶ್ರವಸ್ಸಿನ ।
ಸೂನುವೇ ಕಥೆಗಳಲಿ ನಿನ್ನನು ।
ದಾನಿ ಬಹುಧರ್ಮಾತ್ಮನೆಂದೊರೆವುದನು ಕೇಳ್ದಹೆನು ॥
ದಾನವೇಶ್ವರನೆನಿಸುತೀಪರಿ ।
ಮಾನಹೀನನವೋಲಕಾರ್ಯವಿ ।
ದೇನವೆಸಗಿದೆ ಮೂರುಲೋಕದ ವೀರಗಿದು ಸರಿಯೆ ॥೧೪॥

ಎಲವೊ ನೀನಿಂದಿವಳನಾರಂ ।
ದೊಲಿಸಲಿಚ್ಛೈಸಿಂತು ಕಪಟವ ।
ಬಳಸುತೀಪರಿ ಪಿಡಿಯುತೊಯ್ವೈ ನಿನಗೆ ತೀರುವುದೇ ॥
ಹಲವುಲೋಕವ ಸೃಜಿಸಿ ಸಲಹುತ ।
ವಿಲಯವೆಸಗುವನಾದಿಪುರುಷನ ।
ಲಲನೆಯೊಲಿವಳೆ ಪಾಪಿ ತೆಗೆ ನಿನಗೇಕೆ ದುರ್ವ್ಯಸನ ॥೧೫॥

ಅರಸನೆನಿಪವನಾತ್ಮಧರ್ಮಕೆ ।
ಕೊರತೆ ಬಾರದತೆರದೆ ನಡೆವುದು ।
ಪರಸತಿಯುದನು ನಿಜಸಹೋದರಿಯುರವೊಲಾದರಿಸಿ ॥
ಧರೆಯ ಪಾಲಿಪುದಿದುವೆ ನೀತಿಯು ।
ಮರೆತು ನೀನಿದನಿಂತು ಕಾಮುಕ ।
ರೆರೆಯನಾಗುತ ಲೋಕಮಾತೆಯೊಳೆರಡನೆಣಿಸಿದೆಯಾ ॥೧೬॥

ನಿಲಿಸು ರಥವನ್ನಿಳಿಸು ಮಾತೆಯ ।
ಖಳನೆ ನಾನಾರೆಂಬುದರಿಯೆಯ ।
ಬಲುಮೆಯೊಂದಿದ ಗೃಧ್ರರಾಜನು ನಾಂ ಜಟಾಯುಕಣಾ ॥
ಕಲಕುವೆನು ನಿನ್ನೊಡಲ ರಕುತವ ।
ನೆಲವೊ ನನಗಿದಿರಾಗು ನಿನ್ನಯ ।
ಹಲವು ತಲೆಗಳಗಾನುಬೆದರೆನು ನೋಡು ತನ್ನದಟ ॥೧೭॥

ಎನುತ ಮಾರುತ ನಭಕೆ ತನಗು ।
ಳ್ಳನಿತು ಶಕ್ತಿಯನಾಂತು ರಥವನು ।
ಹಣಿದವಾಡುವೆನೆನುತ ರೆಕ್ಕೆಯೊಳೆರಗುತಪ್ಪಳಿಸೆ ॥
ಝಣಝಣಧ್ವನಿಗೈದು ಘಂಟೆಗ ।
ಳೆಣಿಸಲಸದಳವಾಗಲುದುರಿದು ।
ಮಣಿಯುರಂಕೆಟ್ಟಳಕವಾದುವು ರಥದ ಕೀಲುಗಳು ॥೧೮॥

ಜೋತತೊಂಡೆಯುಪರ್ಣ ವಾಯುಸ ।
ಪಾತುರದೊಳೆರಗುತ್ತ ಶಬರನ ।
ನೂತನದ ಬಲೆಗಿರದೆ ಸಿಲುಕಿದತೆರದೊಳೀದಿನದಿ ॥
ಸೀತೆಯುನು ಬಯಸುತ್ತ ತನ್ನೀ ।
ಘಾತಕೆಡೆಯಾಗುತ್ತಲೊರಗುವ ।
ರೀತಿಯೊದವಿತು ನಿನಗೆ ಕೊಳ್ಳೆಂದೆನುತ ಕೊಕ್ಕಿನಲಿ ॥೧೯॥

ಕುಕ್ಕುತಾತನ ತನುವ ರಕುತವ ।
ದುಕ್ಕುವಂದದಿ ಬಗಿದು ಕಾಲ್ಗಳಿ ।
ನಿಕ್ಕಿ ಸೂತನ ಕೊಂದು ರಥವಾಜಿಗಳ ಖಂಡಿಸಲು ।
ಪಕ್ಕಿಗೇನೀಪೌರುಷವೆನು ।
ತ್ರಿಕ್ಕಜಂಗೊಂಡಾಗ ಖಳ ದು ।
ವ್ರಿಕ್ಕಿ ಧಾರಿಣಿಗಿರದೆ ಧನುವಿಂಗಸನುಬಾಣವನು ॥ ೨೦ ॥

ಅಳವಡಿಸುತೆಸೆಯಲ್ಕೆ ತಾನದ ।
ಕಳುಕದಾಗಳೆ ಬೀಸಿ ರೆಕ್ಕೆಯ ।
ಕೆಲಕೆ ಜಾರಿಸುತಂದುಮುಂದೆಡೆ ಬಂದ ಬಾಣವನು ।
ತಲೆಯ ಮೇಲಣ ಮುಕುಟವೆಲ್ಲವು ।
ನೆಲಕೆ ಬೀಳ್ವವೊಲೊದೆದು ಬೆನ್ನೊಳು ।
ಕುಳಿತು ಮುಂಡೆಯನಿರದೆ ಕೊಕ್ಕಿಂಕುಕ್ಕಿ ಗಾಸಿಸಲು ॥ ೨೧ ॥

ಬದರಿದನು ಬೆನ್ನಿಂದ ಪಕ್ಷಿಯ ।
ನಿದನುಪೇಕ್ಷಿಸಲಾಗದೆನುತವೆ ।
ಬದಿಯ ಕಡುಗವ ಸೆಳೆದು ರೆಕ್ಕೆಗಳೆರಡನುರೆ ತರಿಯೆ ।
ಪದುಮನಾಭನೆ ರಾಮ ಸಲಹೆಂ ।
ದೊದರುತುರುಳಿದನಾಜಟಾಯುವು ।
ಬೆದರುತಂಗನೆ ಚೀರ್ದು ಬೈದಳು ನಿಜಪುರಾಕೃತವ ॥ ೨೨ ॥

ಏನಿದಕಟೀಗೆನ್ನದೃಷ್ಟವು ।
ಹೀನಭಾಗ್ಯೆಯನಿಂದು ರಕ್ಷಿಸ ।
ಲೀನಭಸ್ಸ್ಥಲಗಾಮಿ ಯತ್ನಿಸುತಸುವ ನೀಗುತಿದೆ ॥
ಪ್ರಾಣನಾಥನನುಳಿದ ಸುದತಿಗೆ ।
ಹಾನಿಯಲ್ಲದೆ ಲೇಸು ಬಪ್ಪುದೆ ।
ದೀನೆಯಾದೆನಗೇನುಗತಿ ಯೆಂದಬಲೆಯೊರಲಿದಳು ॥ ೨೩ ॥

ಪರಮಮಿತ್ರನೆ ಪಕ್ಷಿರಾಜನೆ ।
ದುರಿತವತಿಗೆನಗಾಗಿ ನೀನೀ ।
ಪರಿಯಕಷ್ಟಕೆ ಗುರಿಯೆನಿಸಿದ್ದೈ ಮರೆಯೆ ನಾಸಿದನು ॥
ಪರಮಪುರುಷನು ರಾಮಚಂದ್ರನು ।
ಬರುವನಿಲ್ಲಿಗೆ ಮರೆಯದೆಲ್ಲವ ।
ನರುಹುತವನ ಹಸಾದವಾಸುತೆ ಮೋಕ್ಷಸುಖಿಯಾಗು ॥ ೨೪ ॥

ಎನುತ ಪೇಳ್ವನಿತರೊಳು ಖಳನಾ ।
ವನಿತೆಯನು ಮುಡಿಪಿಡಿಯುತೆತ್ತು ।
ತ್ತನಿಲವೇಗದೊಳಡರಿ ನಭವನು ಮುಂದೆ ಪೋಗುತಿರೆ ॥
ಅನುಪಮಾನಶರೀರದಿಂದಲಿ ।
ಘನತರಾದ್ರಿಯ ಕೋಡುಗಲ್ಗಳ ।
ನನುಕರಿಪತೆರದಿಂದ ಕುಳಿತಿಹ ಕಪಿಗಳೈವರನು ॥ ॥ ೨೫ ॥

ಸುದತಿ ಕಾಣುತ ತನ್ನ ಮೇಲಣ |
ಹೊದಕೆಯುಂಚನು ಗೀಳುತದರೊಳು |
ಹುದುಗಿಸುತ ತೊಡವುಗಳನಾಗಳೆ ಕಟ್ಟಿಪೊಟ್ಟಳವ ||
ಸದಯುರೇ ನೀವಿದನುಕೊಳ್ಳುವುದು |
ಹೃದಯವಲ್ಲಭರಾಮನ್ಯೈತರೆ |
ಮುದದೊಳರುಹುವುದೆನ್ನವಸ್ಥೆಯನೆನುತಲವರೆಡೆಗೆ ||೨೬||

ಎಸೆಯಲದನವರಾಂತು ಕಡುಬೆ |
ಕ್ಕಸವನಾನುತಲೆವೆಯನಿಕ್ಕದೆ |
ಯಸುರಚೇಷ್ಟೆಯ ನೋಡುತಿರ್ದರು ಮರುಗಿ ಮನದೊಳಗೆ ||
ಶಶಿವದನೆಯಿನ್ನೇಂ ತನಗೆಕ್ಕೈ |
ಬಸವಳಿದಂತಾಯ್ತೆನುತಲಸ |
ವಸದಿ ಪೋಗುತ ಕಾಣದಾದನು ದನುಜಪತಿಯಿದನು ||೨೭||

ತೆರಳುತೀಪರಿಯಿಂದೆ ಕೆಳಗಡೆ |
ಮೆರೆವಪಂಪಾಸರವ ದಾಂಟುತ |
ಪರಿಪರಿಯ ವನಪರ್ವತಂಗಳನೆಲ್ಲ ಪಿಂದುಳುಹಿ ||
ಧರೆಯಭಾಗವನೆಲ್ಲ ಕಳೆಯುತ |
ತರತರದೊಳೊಪ್ಪುತಿಹ ತೆರೆಗಳ |
ನುರುಭಯಂಕರವಾಗಿ ಭೋರ್ಗರೆಯುತ್ತೆ ರಂಜಿಸುವ ||೨೮||

ಶರಧಿಯನು ಕಂಡದರಮಧ್ಯದೆ ।
ಮೆರೆವ ಕೋಟೆಗಳಿಂದ ಸುರನರ ।
ವರರಿಗಸದಳಪುಗುವೊಡೆಂಬವೊಲೆಸೆವಲಂಕೆಯನು ॥
ಹರಿಸದಿಂದೊಳವೊಕ್ಕು ಲಕ್ಷ್ಮೀ ।
ಸುರುಚಿರಾವುಳಮುಖವು ದಿಟವಿದು ।
ಕೊರತೆಯೇನಿವಕೆಂಬವೊಲ್ಮೆರೆವರಮನೆಯನೈದಿ ॥೨೯॥

ನಿರುಪಮಾಂತಃಪುರವ ಸೇರುತ ।
ಕರೆದು ಭೂತಾಕೃತಿಯ ವದನದ ।
ಪರಿಚರಿಯದಸುರಿಯರ ಸೀತೆಯಸೇವೆಗನುಗೊಳಿಸಿ ॥
ಸರಸಿಜಾನನೆಯಾಣತಿಯನುರೆ ।
ಸಿರದೊಳಾನುತ ನೀವು ನಡೆವುದು ।
ಕೊರತೆಯಿನಿಸುಂ ಮನಕೆತೋರದತೆರದೆ ಸೇವಿಪುದು ॥೩೦॥

ತನಗಿವಳನೊಡಗೂಡಿಸುವುದೇಂ ।
ಘನದಕಾರ್ಯವು ನಿಮಗದೆನಿಬರೊ ।
ವನಿತೆಯರ್ಕಳನೊಲಿಸಿ ನೆರಪಿದ ಚದುರೆಯರುನೀವು ॥
ಎನುತ ನೇಮಿಸಿ ಸಭೆಗೆ ನಡೆತಂ ।
ದನಿತುಮಂ ತಾನೆಸಗಿದಕೃತವ ।
ನಿನಿಸು ಹೇಸದೆ ಸಚಿವಮುಖ್ಯರಿಗೊರೆದು ತವಕದಲಿ ॥೩೧॥

ಬರಿಸಿ ತನಗತ್ಯಾಪ್ತಗೆನಿಸುವ ।
ದುರಳರಕ್ಕಸರೆಂಟುಮಂದಿಯ ।
ನೊರೆದನವರೊಡನಾ ಜನಸ್ಥಾನದಲಿ ರಾಘುವನು ॥
ಚರಿಸುವನು ಸೋದರನ ವೆರಸುತೆ ।
ಮರೆಸಿ ನೀವಲ್ಲಿರುತೆ ನಡೆವಾ ।
ಚರಿಯುವೆಲ್ಲವನೆನಗೆ ಲೇಖನಮುಖದೆ ತಿಳಯಿಸುತ ॥೩೦॥

ಸಮಯವೀಕ್ಷಿಸುತವರ ಕೊಲುವಾ ।
ಕ್ರಮವ ಯೋಜಿಸುತಿರ್ಪುದೆನುತೊರೆ ।
ದಮಿತವಾದುಡುಗೊರೆಯನಿತ್ತವರುಗಳ ಬೀಳ್ಕೊಟ್ಟು ॥
ಸುಮಶರಂಗಳು ನಾಂಟೆ ಹೃದಯವ ।
ನಮಮ ಕಡುಬೆಮೆಗೊಂಡು ಕುಮತಿಯು ।
ಕಮಲಲೋಚನೆಯೆಡೆಗೆ ಬಂದನು ನುಡಿಸಿದನು ಸತಿಯ ॥೩೩॥

ಎಲೆಗೆ ಸೀತಾಲಲನೆ ನಿನ್ನಯ ।
ಚೆಲುವಿಗೆನ್ನಸು ಸೂರೆಪೋದುದು ।
ಸಲೆ ಕಟಾಕ್ಷವ ಬೀರುತೆನ್ನನು ಕರುಣದಿಂದುಳುಹು ॥
ಬಲವಿಹೀನನನಂಗನಿಂದೀ ।
ಬಲನಿಧಾನನೆನಿಪ್ಪ ದಶಶಿರ ।
ಗಳವು ತಾನೆನೆ ಜಗವು ನಗುವುದು ಮಾಣಿಸಿದನೊಲಿದು ॥೩೪॥

ಕ್ಷಿತಿಜೆ ನಿನ್ನಯ ಚರಣಕಮಲ |
ಕ್ಕತಿಶಯನೆನಿಪ್ಪೆನ್ನ ಮಕುಟವ |
ನತುಳಪಾಮಕೆಗೈದು ಪೂಜಿಪೆನನುದಿನದೊಳದನು ||
ಅತನುಹತಗೆನಗಿಂದು ಸುಖಸಂ |
ತತಿಯನೊದವಿಪ ನಿನ್ನಸಂಗವ |
ಹಿತದೆ ಕರುಣಿಸಿ ಕಾಯಬೇಕೆಂದೆರಗಿದನು ಪದಕೆ ||೩೫||

ಕೇಳುತಿರ್ದಳು ಸುದತಿಯಾತನ |
ಕೀಳುನುಡಿಗಳ ಕೆರಳಿದಳು ಖಳ |
ಖೂಳ ನೀನಿಂತೇಕೆ ಗಳಹುವೆ ಸಾವ ಲೆಕ್ಕಿಸದೆ ||
ಸೊಲುತಲೆಗಳು ನಿನ್ನವಿವು ಭೂ |
ಪಾಲರಾಮನ ಬಾಣವಹ್ನಿ |
ಜ್ವಾಲೆಗಾಹುತಿಯೆನಿಸದುಳಿವುವೆ ಕಾಣೆ ನೀನಿದನು ||೩೬||

ಎಂದುನುಡಿವಾಸತಿಯ ಬಿರುನುಡಿ |
ಗಂದು ದಶಕಂಧರನು ಮುಳಿಯುತ |
ಲಂದನಾಕಾಹಿನ ದನುಜೆಯರಿಗಿಂದಿವಳನೊಯ್ದು ||
ಬಂದಿಯೊಳಗಿರಿಸುತ್ತ ಶೋಕೆಯ |
ನಂದನದೊಳುರುಭಯವ ಪುಟ್ಟಿಸು |
ತೊಂದಬುದಸರಿಯಂತ ಕಾದಿಹುದನಿತರೊಳಗಿವಳು ||೩೭||

ಬಲಿದರೊಳ್ಳೆತನೊಂದಿ ಸುಖಿಸುವ ।
ಳೊಲಿಯದಿರೆ ಮರುದಿನವೆ ಮಾರಿಗೆ ।
ಬಲಿಯಹಳು ಖಂಡಿತದನುಡಿ ಯಿಂತಿದಕೆ ಕವಡಿಲ್ಲ ॥
ಸಲಿಗೆಯಾನುಡಿಸಲ್ಲದಿವಳೊಳು ।
ಕಲುಮನದ ಕಡುಸೊಕ್ಕಿನಿವಳನು ।
ಬಲುಹಿನಿಂ ಬಸಗೊಳಪುದೆಂದೊದರುತ್ತೆ ತೆರಳಿದನು ॥ ೩೪ ॥

ಬಡನೆ ಬಂದುದು ದಡಿಗರಕ್ಕಸಿ ।
ಗಡಣವೀಕೆಯ ಮುತ್ತಿಕೊಂಡುದು ।
ನಡೆನಡೆಯೆನುತ್ತಟ್ಟುತಾರ್ಭಟಿಸುತ್ತ ಬೆದರಿಸುತೆ ॥
ಮಡದಿ ಗಡಗಡನಡುಗುತಡಿಯಿಡು ।
ತೊಡೆಯುನಹರಘುರಾಮನಡಿಗಳ ।
ಬಿಡದೆ ನೆನೆಯುತೆ ಪೋಗಿಕಾಲವ ಕಳೆದಳಾಬನದೆ ॥ ೩೫ ॥

ನಾಲ್ಕನೆಯ ಸಂಧಿ ಸಂಪೂರ್ಣಂ.

೫ನೆಯ ಸಂಧಿ.

ಸೂ|| ವಿರಾಘಭುಜನರಸುತ್ತೆ ಸೀತೆಯು |
ನುರುವನವಿ ಕಂಡಾಜಟಾಯುವ |
ನರಿಕಬಂಧನನರಿದು ಮಾತಂಗಾದ್ರಿಗೈದಿದನು ||

ಇರಲು ಲಕ್ಷ್ಮಣನಿತ್ತ ಸೀತೆಯು |
ಬಿರುನುಡಿಗೆ ಮರುಮರುಗಿ ಮನದೊಳು |
ತೆರಳುತಣ್ಣನಕಡೆಗೆಕಾನನದೊಳಗೆ ಪೋಗುತಿರೆ ||
ದುರುಳದನುಜನು ಹರಣವಿಡುವಾ |
ಗೊರಲಿದಾನುಡಿಗಂಜಿ ರಾಘವ |
ನರರೆ ತನ್ನವರಿದನು ಕೇಳ್ಗೊಡದೇನಗೈದಪರೊ ||೧||

ಎಂಬಸಂಶಯವಡರೆ ಮನವನು |
ಹಂಬಲಿಸಿ ತೊಳಲುತ್ತ ವನನಿಕು |
ರುಂಬವನು ನಿಮಿಷದಲಿ ದಾಂಟ ಬರುತ್ತಮಿದಿರಿನಲಿ ||
ಕಾಂಬರಾರೆಂದೊತ್ತಿ ನೋಡು |
ತ್ತಂ ಬರುವವನೆ ತಮ್ಮನೆಂದರಿ |
ದಂಬುಜಾಕ್ಷನು ದುಗುಡದಿಂ ನುಡಿಸಿದನು ಲಕ್ಷ್ಮಣನ ||೨||

ಏನಿದೇನೈ ತಮ್ಮ ನಿನ್ನನ ।
ಮೀನವೆಸಿಸಿದರೀತಿ ನೀನೆ ।
ನ್ನಾಣತಿಯ ಮೀರ್ದಿಲ್ಲಿಗೈದಿಹೆ ಸೀತೆಯೆಲ್ಲಿಹಳು ॥
ಕಾನನದೊಳೇಂಬರುತಿರ್ಪಳೆ ।
ಕಾಣಿಸಳು ತನಗೇಕೆ ನಿನ್ನಯ ।
ದೀನವದನವ ನೋಡೆಕಳವಳವಹುದು ಮಾನಸಕೆ ॥ ೩ ॥

ತಮ್ಮ ನೀಂ ಪರಮಾಪ್ತನೆಂದರಿ ।
ದೊಮ್ಮೆ ಮಡದಿಯ ನಿನ್ನ ಬಳಿಯೊಳ ।
ಗುಮ್ಮಹದೆ ಬಿಡಲಿಂತುಪೇಕ್ಷಿಸುತವಳನುಳಿಯುವದು ॥
ಸಮ್ಮತವೆ ನಿನಗೆಮ್ಮೊಳೀಪರಿ ।
ದುಮ್ಮನದ ವೈಷಮ್ಯವಕಟಾ ।
ಉಮ್ಮಳಕೆ ಗುರಿಮಾಳ್ಪುದೇನಿದು ಬಿನದವೇಪೇಳಾ ॥ ೪ ॥

ದೇಶಕೋಶವನುಳಿದು ಪೆತ್ತರೊ ।
ಳಾಶೆಯನು ಮಿಗೆ ತೊರೆದು ತನಗೆ ನಿ ।
ಜೇಶನೇಗತಿಯೆಂದು ನಂಬುತ್ತೆನ್ನ ಪಿಂದೈದಿ ॥
ಲೇಶಮಾತ್ರವು ಘೋರವಿಪಿನ ।
ಕ್ಲೇಶಕಂಜದೆ ಭೂರಿಸುಗುಣಾ ।
ವೇಶದಿಂ ಮೆಚ್ಚಿಸಿದಮಡದಿಗಿದಲ್ತೆ ಉಡುಗೊರೆಯು ॥ ೫ ॥

ಖರನ ಸಂಹರಿಸಿದುದೆ ಮೊದಲಾ ।
ಗಿರದೆ ನಮ್ಮೊಳು ಬಹುಳವೈರವ ।
ಧರಿಸುತಸುರರು ಸಮಯವೀಕ್ಷಿಸುತಿರ್ಪರೆಂಬುದನು ॥
ಅರಿಯುದನೆ ನೀನೆನಗೆ ಬುದ್ಧಿಯು ।
ನೊರೆಯೆಯಾ ನಾಂಬರ್ಪಕಾಲದೊ ।
ಳರರೆನಿನಗಿಂದಂಧಕಾರವದೆಂತು ಸಮನಿಸಿತು ॥೬॥

ಮನಕೆ ಸಂಶಯವಾಗಿ ತೋರ್ಪುದು ।
ಜನಕತನುಜೆಯು ಕುಶಲದಲ್ಲಿಯೆ ।
ಮನೆಯೊಳವಳನು ಕಾಂಬೆವೋ ಮೇಣ್ಕಾಣದಳಲುವೆವೋ ॥
ವನಿತೆಯಾಮೃದುತನುವಿಗೆಳಸುತೆ ।
ದನುಜರವಳನು ಮುರಿದು ತಿನ್ನುತ ।
ತಣಿವ ನೊಂದದೆ ಮಾಣರೇಗುವೆನಿದಕೆ ತಾನಿಂದು ॥೭॥

ವಾದವೇತಕೆ ಲಕ್ಷ್ಮಣನೆ ನೀ ।
ನೈದುವಾ ಸಮಯದಲಿ ತಾನಾ ।
ಮೇದಿನೀಸುತೆ ಸುಖದೊಳರ್ದಳೆ ತಳರಮಂದಿರದೆ ॥
ಸೋದರನೆ ಕೃಪೆಯೆತ್ತ ಪೋಯಿ ।
ತ್ತಾದುದೇನನಿವಾರ್ಯವಾಕೆಯೊ ।
ಳೀದುರಾಗ್ರಹಕೇಂ ನಿಮಿತ್ತವು ಪೇಳು ವಹಿಲದಲಿ ॥೮॥

ಏತಕಿನ್ನಕಟೆನ್ನ ಬಾಳಿಕೆ ।
ಬೀತತರುತಾನಾದೆನೈ ನನ ।
ಗಾ ತಳೋವರಿಯಿಲ್ಲದಿರೆ ಪೆರತುಂಟೆ ಜೀವನವು ॥
ಧಾತುಗೆಟ್ಟೆನು ತಮ್ಮ ನೀನಿ ।
ನ್ನೇತಕೀಬಳಯಿರ್ಪೆ ವರಸಾ ।
ಕೇತಪುರಿಗಿರದೈದಿ ಭರತನಕೂಡಿ ನೀಂ ಬದುಕು ॥೯॥

ಮುಳಿಸು ನಿನ್ನೊಳಗಿಲ್ಲ ಪೂರ್ವದೆ ।
ಗಳಿಸಿದುದನಿಂದುಣ್ಬೆನೆನಗಾ ।
ಗಳಲದಿರು ಶುಭಮುಕ್ಕೆ ಮಾರ್ಗದೊಳೆನಲು ರಾಘವನು ॥
ಪಳಪಳನೆ ಕಂಬನಿಯ ಧಾರೆಗ ।
ಳಿಳೆಗೆ ಸುರಿಯಲು ಲಕ್ಷ್ಮಣನ ಮನ ।
ದೊಳಗೆ ಶೋಕಾನಳವು ಪೊಕ್ಕುದು ಸುಟ್ಟುದವಯವವ ॥೧೦॥

ಮರೆದನಂಗವನೊಡನೆ ಕೆದರಿದ ।
ಕರಣವೊದಲಂತಾಗಲಂಜುತ ।
ಕರವ ಜೋಡಿಸಿ ಬಿನ್ನವಿಸಿದನು ಗದ್ಗದಸ್ವರದೆ ॥
ಬರೆಯಲೇನನು ದೇವ ಚಿತ್ತಾ ।
ಕ್ಕರಿಕೆಯಿಲ್ಲದುದುಂಟೆ ರಕ್ಕಸ ।
ನೊರಲಿದಾರ್ತಧ್ವನಿಯೆ ಕಾರಣವೆನ್ನ ಬರವಿಂಗೆ ॥೧೧॥

ಮೋಸವಿನುಡಿ ತಾಯೆ ಮಹಿಮಾ ।
ವಾಸರಾಮಂಗಿಲ್ಲಪಾಯವು ।
ಲೇಸ ಕಾಂಬಿರಿ ನಿಮಿಷ ಸೈರಿಪುದೆನುತ ನಾನುಸಿರೆ ॥
ಭೂಸುರಾಂಗಿಗೆ ನಿಮ್ಮೊಳಹ ವಿ ।
ಶ್ವಾಸವೇ ಗಾಢಾಂಧತೆಯನಿ ।
ತ್ತೀಸುಬೇಡಿದೊಡೈಸು ನಿಷ್ಫಲವೆನಿಸಿತೆಲ್ಲವನು ॥೧೨॥

ಪೋಗುಪೋಗೆಂದೆನ್ನನಟ್ಟುತ ।
ಮೇಗುಕೇಳಾವುದನು ನೋಡದೆ ।
ಬಾಗುಳದೆ ಹುಲುನರರಿಗೊಪ್ಪುವ ಕೀಳುನುಡಿಗಳಲಿ ॥
ಬೇಗುದಿಯನೆನಗಿತ್ತರದರಿಂ ।
ಬೇಗ ಬಂದೆನು ದೇವ ಕರುಣಾ ।
ಸಾಗರನೆ ಕೃಪೆದೋರಿ ಮನ್ನಿಪುದೆನ್ನ ನೀನೆನಲು ॥೧೩॥

ವಿಾರಿ ತನ್ನಯ ನೇಮವನು ಕಾ ।
ಯ್ದೇರಿ ಬಂದುದದೊಂದು ಮೇಣವಿ ।
ಚಾರೆಯೆನಿಪಾ ಮಾನಿನಿಯು ಮಾತಿಂಗೆ ಮತಿಗೆಟ್ಟು ॥
ಕ್ರೂರದಾನವರಿರ್ಪಕಾಡೊಳ ।
ಗಾರುಸಾಹಾಯಕರುಮಿಲ್ಲದ ।
ನಾರಿಯೊಬ್ಬಳ ಬಿಟ್ಟು ಬಂದಾ ತಪ್ಪುತಾನೊಂದು ॥೧೪॥

ಇಂತು ನೀನಪರಾಧವೆರಡಂ ।
ಭ್ರಾಂತಿಯಿಂದಲಿ ಗೈದೆ ನಿನ್ನನೆ ।
ಸಂತತವು ನಂಬಿರ್ದನವೊಗ್ಗಳಗಿಂತದೇಕಾದೆ ॥
ಚಿಂತೆಯೊಂದಿರೆ ದೇವಿಯಾಕೆಯು ।
ಸಂತವಿಸುತಲ್ಲಿಪ್ಪುದನು ಬಿಸು ।
ಟೆಂತುಟಾದೊಡವಾಗಲೆಂದುಳಿದಕಟ ಬರಬಹುದೇ ॥೧೫॥

ಎಂದು ದುಃಖಿಸುತಾಡಿದಣ್ಣನಿ ।
ಗೆಂದನಾ ಸೌಮಿತ್ರಿ ಲಾಲಿಪು ।
ದಿಂದುವದನೆಯು ನಿಷ್ಠುರೋಕ್ತಿಯ ಕೇಳ ಜೀವಿಪರೆ ॥
ಇಂದು ಮತ್ಪ್ರಿಯನಳಿದೊಡೆನ್ನನು ।
ಹೊಂದು ವಿಚ್ಛೆಯೊಳಗಲದಿರ್ಪೆಯು ।
ಕೊಂದುಕೊಂಡಪೆನಲ್ಲದುಳಿಯೆನೆನುತ್ತ ವಾಚಿಸಲು ॥೧೬॥

ಒಡೆದುದೆನ್ನೆದೆ ಬಳಿಕ ಬೇಡಿದೆ ।
ನೊಡತಿ ಮನ್ನಿಪುದೆನುತವಲ್ಲಿಂ ।
ದುಡುಕಿನಿಂದೈತಂದೆ ನಾಂ ಭವದೀಯಸನ್ನಿಧಿಗೆ ॥
ತಡೆಯಲಸದಳವಾದ ನುಡಿಗೇ ।
ಳ್ದೆಡೆಯೊಳಂತಿಹಃದಣ್ಣದೇವನೆ ।
ನುಡಿಯಲಂಜುವೆನೆನ್ನ ದೋಷವ ಮರೆದು ನೀಂ ಸಲಹು ॥೧೭॥

ಎನುತಮಾಡಿದ ಲಕ್ಷ್ಮಣನ ನುಡಿ ।
ಗಿನಕುಲಾಧಿಪನಿರದೆ ಮನ್ನಿಸಿ ।
ವನದೆ ನಡೆದನು ವಾಯುವೇಗದೊಳಲೆವನೆಯ ಕಡೆಗೆ ॥
ಜನಕಜೆಯ ಬಾಗಿಲೊಳು ಕಾಣದೆ ।
ಮನಕೆ ಸಂಶಯವಾಗಲೊಡನೆಯೆ ।
ಘನವಿಷಾದವನಾಂತು ನಿಲಯವ ಪುಗುತ ಹುಡುಕಿದನು ॥೧೮॥

ಕಾಣಲಿಲ್ಲವು ತನ್ನಸತಿ ಬಳಿ ।
ಕಾಣೆಯಿಕ್ಕುತ ಕೂಗಿದನು ಮ ।
ತ್ಪ್ರಾಣವಲ್ಲಭೆ ಮಾತನಾಡೆಯದೇತಕೆಲ್ಲಿರುವೆ ॥
ಕೇಣವನು ಬಿಡು ಹುಲ್ಲೆಯಿದೆಕೊ ।
ಳ್ಳೇಣಲೋಚನೆ ಬೇಗ ಬಾ ನಿ ।
ನ್ನಾಣತಿಯ ಮಾರುವನೆ ರಾಮನಿದೇಕೆ ತಡಗೈವೆ ॥೧೯॥

ಅಸುರರಂಜಿಕೆಗವಿತುಕೊಂಡೆಯೊ ।
ಅಸುರಮರ್ದನನಿದೆಕೊ ಬಂದಿಹೆ ।
ನೊಸಗೆಯಲ್ಲವೆ ಸತಿಯುರಗ್ರಣಿಗಿನಿಯನಾಗಮನ ॥
ಬಸಿದು ಬೀಳುವ ನಿನ್ನ ಮಮತಾ ॥
ರಸವದೋಪನೊಳಂಗಿಪೋದುದೆ ।
ಬಸಿರಶಿಖಿ ಬಲುಹಾಯ್ತು ತೋರಿಸು ಮೊಗವ ಶಶಿವದನೆ ॥೨೦॥

ಸುತ್ತಿ ಕೂಗಿದುದಾಯ್ತು ಮನೆಯೊಳ |
ಗೆತ್ತಲುಂ ಜಾನಕಿಯ ಸುಳವಿ |
ಲ್ಲೆತ್ತ ಪೋದಳೊ ಕಾಣಲೊಲ್ಲಳು ಚಿತ್ತವಲ್ಲಭೆಯು ||
ಚಿತ್ತದಾಸರ ಕಳೆಯಲುಪವನ |
ದತ್ತಲೈದಿರಬೇಕು ಲಕ್ಷ್ಮಣ |
ಮತ್ತಕಾಶಿನಿಯಿಪ್ಪೆಡೆಯ ನೀಂ ಗೊತ್ತುಗೈಯೆಸಲು ||೨೧||

ತಾನು ಗೈದವಿವೇಕದಿಂದೀ |
ಹಾನಿಯಣ್ಣಂಗಾಯ್ತು ಶಿವಶಿವ |
ಹೀನಭಾಗ್ಯನು ಧರೆಯೊಳೆನಗೆ ಸಮಾನರಾರಿಹರು ||
ಮಾನಿನಿಯ ಕುಶಲದೊಳೆ ಸಂಶಯ |
ವೇನಮಾಡುವೆನಿನ್ನು ಮುಸುಕಿದ |
ಕಾನನಂಗಳನೆಲ್ಲ ಶೋಧಿಪೆನೆನುತ ಲಕ್ಷ್ಮಣನು ||೨೨||

ಹೂವನಂಗಳೊಳರಸಿದನು ಗೋ |
ದಾವರಿಯ ತಡಿಗಳಲಿ ಕೂಗಿದ |
ನಾವನಜತತಿಯೊಗೆದ ಸರಗಳನೆಲ್ಲ ಬಳಸಿದನು ||
ಆವೆಡೆಯೊಳಂ ಕಾಣಳನ್ನೇ |
ಗೈವೆನೆಂದೆಲೆವನೆಗೆ ಮರಳುತ |
ದೇವ ಚಿತ್ತೈಸೆಲ್ಲಿಯುಂ ದೇವಿಯರ ಸುಳವಿಲ್ಲ ||೨೩||

ಎಂದು ನುಡಿಯಲ್ಕೇಳೆ ರಘುಪತಿ ।
ನೊಂದು ಹಮ್ಮೈಸಿದನು ಮನದೊಳ ।
ಗಿಂದುಮುಖಿ ನೀನಿಂತು ಮೋಸವಗೈವುದೇ ತನಗೆ ॥
ದಂದುಗಕ್ಕೆಡೆಗೈದು ನನ್ನನು ।
ಮಂದಭಾಗ್ಯನನೊರ್ವನನೆ ಬಿಡು ।
ತಿಂದು ನೀನಕಟೆತ್ತ ತೆರಳಿದೆ ಮುಂದೆ ಗತಿಯೇನು ॥ ೨೪ ॥

ಹಾ ತನೂದರಿ ಸೀತೆ ಭುವನ।
ಖ್ಯಾತೆ ಜನಕಸುಜಾತೆ ಸುಗುಣೋ ।
ಪೇತೆ ಸಜ್ಜನಗೀತೆ ಮುನಿಸುಪ್ರೀತೆ ಘನದಯಿತೆ ॥
ಬೀತುದೆನ್ನಯ ಸಿರಿಯು ಭುವನ ।
ಖ್ಯಾತ ರಘುಕುಲಮುದ್ಧದಬುಧಿಯೊ ।
ಳಾತುಕೊಂಡೆನಕೀರ್ತಿಯನು ತಾನೆನುತ ಹಲುಬಿದನು ॥ ೨೫ ॥

ನೋಡಿದನು ಲಕ್ಷ್ಮಣನು ರಾಮನ।
ವಾಡಮನುಜರಿಗುಜಿತವೆನಿಸುವ ।
ಗಾಢತರದಾಲಾಪಗಳ ನಿವನಡಗಿಸುವೆನೆನುತ ॥
ಬೇಡಿದನು ಕೈಮುಗಿದು ನಿನಗೀ ।
ಪಾಡು ತಕ್ಕುದೆ ದೇವ ದೇವಿಯು ।
ನಾಡೆ ಪುಡುಕುವವೇಳು ಸನಿಹದ ಗಿರಿಯು ಗುಹೆಗಳೊಳು ॥ ೨೬ ॥

ನರನು ನೀನಲ್ಲಸುರರಳಿವಿಗೆ ।
ಧರೆಯೊಳವತರಿಸಿರ್ಪ ಮಾಧವ ।
ನೊರೆಯಲೇನವನಿಜೆಯು ಸಾಕ್ಷಾಲ್ಲಕ್ಷ್ಮಿಯೆಂಬುದನು ॥
ಅರಿಯದನೆ ನೀಂ ನಿನಗಿದೇಕೀ ।
ಪರಿಭವಣೆ ಚಿತ್ತದಲಿ ಸಾಕೀ ।
ಳರಸ ದೇವಿಯನರಸಲೆಂದಲ್ಲಿಂದ ಪೊರಮಡಿಸೆ ॥೭೭॥

ದಾರಿಯಲ್ಲದದಾರಿಗೈದುತ ।
ಚೀರಿಯಂದದಿ ಚೀರಿ ಮತ್ಸಖಿ ।
ಬಾರ ಜಾನಕಿ ಹೃದಯನಾಯಿಕೆ ಬಾ ಸರೋಜಮುಖಿ ॥
ಧೀರೆ ಗುಣಮಣಿಹಾರೆ ರತ್ಯಾ ।
ಕಾರೆ ದುರಿತವಿದೂರೆ ರಾಮನ ।
ನೀರೆ ನೀನಿಂದೆತ್ತಲೈದಿದೆ ಮೊಗವ ತೋರೆನುತ ॥೭೮॥

ದಿಕ್ಕುತೋರದೆ ಕಣ್ಗಳೊಳು ನೀ ।
ರುಕ್ಕಿಬರೆ ರೋದನವನೆಸಗುತ ।
ಲಕ್ಕಜದ ನರರೂಪದಾಹರಿ ಹರವಸದೆ ಸೊರಗಿ ॥
ಪಕ್ಕಿಗಳ ಕೈವೀಸಿ ಕರೆಯುತ ।
ಸೊಕ್ಕುಜೌವನೆ ತನ್ನ ಮಡದಿಯ ।
ನಕ್ಕಟಾ ನೀಂಕಾಣಿರೇ ಎಂದೊಲಿದು ಬೆಸಗೊಂಡ ॥೭೯॥

ಹರಿಣಗಳ ಕೇಳಿದನು ತನ್ನಯ |
ಹರಿಣಲೋಚನೆಯೆತ್ತಲೆನ್ನುತ |
ಕರಿಣಿಗಳ ಕಂಡರ್ಥಿಸಿದನಾಕರಿಗಮನೆಯಿರವ ‖
ಧರಣಿಯನು ಬೇಡಿದನು ತನಗಾ |
ಧರಣಿಜೆಯ ತೋರೆನುತ ತಾಪಸಿ |
ಯರನು ಕೇಳಿದನಾ ತಪಸ್ವಿನಿ ಯಿರ್ಪಳೆಲ್ಲೆನುತ ‖೩೦‖

ಧೈರ್ಯಗೆಟ್ಟುದು ಮನವು ಮೊದಲಿನ |
ಕಾರ್ಯವೆಲ್ಲಡಗಿತ್ತೊ ಶಿವಶಿವ |
ಶೌರ್ಯವೆಲ್ಲವು ಸಡಿಲಿತುತ್ಸವಮೆಲ್ಲಮಿಂಗಿದುದು ‖
ಸ್ಥೈರ್ಯಭುಜಬಲದರ್ಪಗಳು ನಿಜ |
ಕಾರ್ಯಗಾಣದೆ ಬಣ್ಣಗೆಟ್ಟುವು |
ಸೂರ್ಯವಂಶದ ನೃಪತಿಗರಸಿಯುನಗಲಿದುದರಿಂದ ‖೩೧‖

ದೇವರಾಮಂಗಾಗಚೆಷ್ಟಾ |
ಭಾವದಿಂ ಜಾನಕಿಯ ಮಾರ್ಗವ |
ನಾವನಂಗಳ ಮೃಗಗಳೆಲ್ಲವು ತೋರಿಸುವುವೆನಲು ‖
ಮೇವನುಳಿಯುತ ಮುಂದೆ ನೆಗೆಯುತ |
ತಾವು ತೆಂಕಣದಿಕ್ಕಿಗೋಡಿದು |
ವೀವಿಶೇಷವ ಕಂಡು ರಘುವರರತ್ತ ನಡೆಯುತ್ತ ‖೩೨‖

ಕಂಡರೊಂದೆಡೆಯಲ್ಲಿ ಹೂವಿನ ।
ದಂಡೆಯಿಂದುದಿರಿರ್ದಪುಷ್ಪವ ।
ಖಂಡಿತದಿ ಜಾನಕಿಯ ಮಂಡೆಯೊಳಿರ್ದುದಹುದೆನುತ ।
ಕೊಂಡು ರಾಘವನದನು ಚುಂಬಿಸಿ ।
ಪುಂಡರೀಕಾಂಬಕೆಯ ನಿಜದಿಂ ।
ಕಂಡನೋ ಎನೆ ಹರಿಸಗಡಲೊಳು ಮುಳುಗಿ ಮೈಮರೆದು ॥ ೩೩ ॥

ಮತ್ತೆ ಚೇತರಿಸುತ್ತಲಿದಕೆ ನಿ ।
ಮಿತ್ತವೇನುಂಟಾಯ್ತು ತನ್ನಯ ।
ಮತ್ತಕಾಶಿನಿ ಮುಡಿದ ಸುಮವಿಂತೇಕೆ ಕೆದರಿದುದು ॥
ಉತ್ತಮಾಂಗದ ಮುಡಿಗದಾವನೊ ।
ಮಿತ್ತುರೂಹಿನದಾನವನು ಹಾ ।
ಯ್ದೆತ್ತಿಕೊಂಡರಸಿಯನು ಪೋಗಿರವೇಳ್ಕುವೆಂದೆನುತೆ ॥ ೩೪ ॥

ಸುತ್ತಮುತ್ತಲು ನೋಡಿ ಹೇಸರ ।
ಗತ್ತೆಗಳು ಸತ್ತಿಹುದ ಕಂಡವ ।
ರೊತ್ತಿನಲಿ ಮುರಿದಿಳೆಯೊಳುರುಳದ ರಥವದೊಂದಿರಲು ॥
ಚಿತ್ತವಿಭ್ರಮವಾಂತು ಮುಂದೈ ।
ದುತ್ತ ತನ್ನಯ ನಾಮವನು ಜಪಿ ।
ಸುತ್ತ ಕೆಡೆದಿರ್ಪಾ ಜಟಾಯುವನಾಗ ನೋಡಿದನು ॥ ೩೫ ॥

ಪರಿದರೆಕ್ಕೆಯ ಸುರಿವರಕುತದ ।
ಗೊರಗೊರೆಂಬುತ್ಕ್ರಮಣಿನದದ ।
ಕೊರಗಣೆಯ ಖಗಪತಿಯು ಮುಖದಿಂದರಿಯುತೆಲ್ಲವನು ॥
ದುರುಳರಾವಣನಿಂದ ತನ್ನಯ ।
ಹರಿಬಕೋಸುಗ ಕೆಡೆದನೆನ್ನುತ ।
ಮರುಗಿದನು ಸಂಸ್ಕರಿಸಿದನು ಮಡಿದಾ ಜಟಾಯುವನು ॥ ೩೬ ॥

ಪರರಿಗುಪಕಾರವನು ಮಾಳ್ಪವ ।
ನಿರಿಸುವನೆ ದೇಹಾಭಿಮಾನವ ।
ನರರೆ ತಂದೆ ಜಟಾಯು ತನಗಾಗಸುವನೀಗಿದೆಯ ॥
ಪರಮಪುಣ್ಯಶ್ಲೋಕ ನೀನಾ ।
ಪರಮಪದದೊಳ್ಸುಖದೆ ಬಾಳೆನು ।
ತರಸ ನುದಕಾಂಜಲಿಯ ನೀಯುತೆ ಮುಂದೆ ತೆರಳಿದನು ॥ ೩೭ ॥

ಬಿಡದೆ ತೆಂಕಣದೆಸೆಗೆ ನಡೆಯುತ ।
ಮೊಡಬಲಂಗಳೊಳಿರ್ಪ ಗಿರಿಗಳ ।
ಸಡರಿ ನೋಡುತ ವನವ ಸೋದಿಸಿ ಗುಹೆಗಳನು ಪುಗುತ ॥
ತಡೆಯದಲ್ಲಲ್ಲರಸಿ ಸೀತೆಯ ।
ಕಡೆಗೆ ಕಾಣದೆ ದುಃಖಪರವಶ ।
ರಡಿಗಡಿಗೆ ಹಮ್ಮೈಸಿ ಬೀಳುತಲೊಡನೆ ಯೇಳುತಲಿ ॥ ೩೮ ॥

ಇಂತು ಕಂಗೆಟ್ಟಡವಿಯುಲಿ ಬಲು ।
ಚಿಂತೆಗಂಗವನಿತ್ತು ತೆರಳುತ ।
ಕಂತುಪೀಡಿತೆಯಾದಯೋಮುಖಿಯೆಂಬ ದನುಜೆಯನು ॥
ಹಿಂತೆ ತಾವಾ ಶೂರ್ಪಣಖೆಗಿರ ।
ದೆಂತು ಗೈದರೊ ತದ್ವಿಧಾನದ ।
ಸಂತವಣೆಗಿವಳರ್ಹೆಯೆನ್ನುತ ಭಂಗಿಸಿದರವಳ ॥೩೯॥

ದಾರಿಯೇ ನೆರೆಕಾಣಬಾರದ ।
ಘೋರಕಾನನದೊಳಗೆ ಬರುತಿರ ।
ಲಾರುಬಟೆಯೊಂದಾಗ ಕೇಳಿಸಿತತಿಭಯಂಕರದ ॥
ಭೂರಿಸೂಕರಹರಿಗಜಂಗಳು ।
ಚೀರಿಡುತ ದೆಸೆಗೆಟ್ಟು ಹಾರಿದು ।
ವೀರಭಸಕಿಂದೇನುಕಾರಣವರಿಯಬೇಕೆನುತ ॥೪೦॥

ಸುತ್ತಲೀಕ್ಷಿಸುತುಭಯದಿಶೆಯಿಂ ।
ದೊತ್ತಿ ಬರ್ಪುವು ಗಿರಿಯುಸಾಲ್ಗಳ ।
ವೆತ್ತಣದ್ಭುತ ಸಿಲುಕಿಸಿದುವಿಂದೆಮ್ಮನಿರುಬಿನಲಿ ॥
ನಿತ್ತರಿಪಹದನಾವುದೆನ್ನುತ ।
ಚಿತ್ತದಲಿ ಸಂಭ್ರಾಂತರಾಗುತ ।
ಮತ್ತೆ ನೋಡುತ್ತಿರಿದರಸುರನ ತೋಳ್ಗಳೆಂದೆನುತ ॥೪೧॥

ಸಿರವದಿರ್ದುದು ಬಸಿರಮಧ್ಯದೆ ।
ಚರಣವಿಲ್ಲದ ಬರಿಯ ಮುಂಡವು ।
ಕರಗಳವು ತಾವೆರಡುಯೋಜನದುದ್ದವಳತೆಯಲಿ ॥
ಉರಿವನೇತ್ರವದೊಂದು ಪಣೆಯೊಳ ।
ಗಿರಲು ಪಸರಿಸಿದುಭಯಕರಗಳ ।
ಸೆರೆಗೆ ಸಿಕ್ಕಿದವನವ್ಮೃಗಂಗಳ ತಿಂದು ತೇಗುತಲಿ ॥೪೦॥

ಅದುಭುತಾಕಾರದಲಿ ಗಿರಿಯವೊ ।
ಲಿದಿರೊಳಿರುವನ ಕಂಡಿದೇನಿಂ ।
ದಿದಕುಪಾಯವು ಕೊಂದೊಡಲ್ಲದೆ ಬಾಳ್ವತವುಗಿಲ್ಲ ॥
ಸದೆದು ಕಳೆ ನೀನೊಂದುಬಾಹುವ ।
ನಿದೆಕೊ ನಾಂ ಮತ್ತೊಂದ ಕಡಿವೆನು
ಬೆದರಲಾಗದೆನುತ್ತೆ ರಾಘುವನೊರೆದನನುಜಂಗೆ ॥೪೧॥

ಭರದೊಳಾಗಳೆ ವೀರರಿರ್ವರು ।
ಶರಗಳಿಂದವನೆರಡುತೋಳ್ಗಳ ।
ನರಿಯಲಾತಂಗರಿವು ಬಂದುದು ಕಂಡನಾಹರಿಯ ॥
ಗುರುವೆ ತವದರ್ಶನದೊಳೆನ್ನಯ ।
ದುರಿತರಾಶಿಯು ಕರಗಿ ಪೋದ ।
ತ್ತರರೆದಾನವಜನ್ಮದುಃಖವುಕಳೆದುದಿಂದಿನಲಿ ॥೪೪॥

ಅರಿಯಲಾನು ಕಬಂಧನೆಂಬವ ।
ನಿರವು ತನಗೀವಿಪಿನಮಧ್ಯದೆ ।
ದೊರೆದುದೀದನುಜತ್ವವೊರ್ವ ತಪೋಧನನುಶಪಿಸೆ ॥
ಪರಿಹೃತಿಯ ಯಾಚಿಸಲು ಲಕ್ಷ್ಮೀ ।
ವರನು ನರನಾಗುದಿಸಿ ನಿನ್ನೀ ।
ಕರವನರಿಯೆ ವಿಶಾಪವಹುದೆನುತವನು ಬೆಸಸಿದನು ॥೪೫॥

ಎಂದಿಗಪ್ಪುದೊ ನಿನ್ನ ಪದಗಳ ।
ಸಂದರುಶನದ ಭಾಗ್ಯವೆಂದರ ।
ವಿಂದನಾಭನೆ ಸಮಯವೀಕ್ಷಿಸುತಿಂದು ಧನ್ಯತೆಯ ॥
ಹೊಂದಿದೆನು ನಿನ್ನಯ ಕರಂಗಳ ।
ನಿಂಧನವನುರಿಗೊಳಿಸಿ ಪಾಪಿಕ ।
ಬಂಧದೇಹವ ದಹಿಸಿದೊಡೆ ಲೇಸಹದು ನಿನಗೆನಲು ॥೪೬॥

ಬಳಿಕ ಸಹಭವರಿಂಧನಂಗಳ ।
ಕಡಿದು ಜೋಡಿಸುತಸುರದೇಹವ ।
ನಿಡುತವುಗ್ನಿಯೊಳುರಿಸಲದರಿಂದೆಳ್ದು ಗಗನದಲಿ ॥
ಕಡುಚೆಲುವ ಗಂಧರ್ವನೊಪ್ಪುತ ।
ನುಡಿಸಿದನು ಸಿರಿಯೆರೆಯ ನಿನ್ನಯ ।
ಮಡದಿಮಣಿಯನು ಕಾಂಬುಪಾಯುವ ಪೇಳ್ವೆನವಧರಿಸು ॥೪೭॥

ಅರಸರಿಗೆ ಷಡ್ಗುಣಗಳೇ ತಾ ।
ವರಿಯೆ ಕಾರ್ಯಕೆ ಸಾಧನಂಗಳು ।
ಪಿರಿಯಕಷ್ಟದೊಳೊದವಿದಾತನೆ ತಿಳಿಯಲುಪಕಾರಿ ॥
ನಿರುತ ನಿನ್ನಾಪತ್ತಿಗೆಣೆಯಾ ।
ದುರುವಿಪತ್ತನು ಹೊಂದಿ ಕೊರಗುವ ।
ಖರಕರಾತ್ಮಜನೆನಿಪ ಸುಗ್ರೀವಾಖ್ಯ ಕಪಿವರನು ॥೪೮॥

ವರಪರಾಕ್ರಮಿಯೆನಿಸಿ ಸೊಕ್ಕಿದ ।
ಹಿರಿಯಸೋದರನಪ್ಪ ವಾಲಿಯ ।
ಕರದೊಳಪಜಯವೊಂದಿ ನಾಲ್ವರು ಮಂತ್ರಿವರರೊಡನೆ ॥
ಇರುವನಾವರಋಶ್ಯಮೂಕದ ।
ಗಿರಿಯೊಳವನನು ಸೇರಿ ಸಖ್ಯವ ।
ನುರುವಿವೇಕದೆ ಬೆಳಸಲಪ್ಪುದು ಕಾರ್ಯವತಿಜವದೆ ॥೪೯॥

ಕಲಹವಾಗಲು ಸೋದರನ ನಿಜ ।
ಲಲನೆ ರುಮೆಯೆಂಬಳನು ಬಲುಹಿಂ ।
ದಲಘುಭುಜಬಲನಿಂದ್ರತನುಜನು ವಾಲಿಯಪಹರಿಸಿ ॥
ನಿಲಯದಿಂ ಪೊರಮಡಿಸಿ ತಮ್ಮನ ।
ನೆಳಲ ಸೈಸದೆ ಕಾಡಿಗಟ್ಟ ।
ಲ್ಕಲೆಯುತಿರ್ಪನು ಸತಿಯ ವಿರಹದೊಳವನು ಕಂಗೆಡುತ ॥೫೦॥

ದೊರೆವುದಾತನ ವೈತ್ರಿ ದಿಟದಲಿ |
ತೆರಳು ಪಶ್ಚಿಮದಿಕ್ಕಿಗೀಗಳೆ |
ಮೆರೆವ ಪಂಪಾಸರದ ತೀರದ ಪುಣ್ಯವನಗಳಲಿ ||
ಪರಿಪರಿಯ ಫಲಪುಷ್ಪವಿಪ್ಪುವು |
ಹರಿಣನೆಕ್ಕಲನಾದಿಯಿಹ ಮಿಗಗಳು |
ಮಿರುವುವಲ್ಲಿಗೆ ಕೆಲವುಕಾಲವ ಕಳೆಯಲನುಕೂಲ ||೫೧||

ಅದರಪಡುವಣ ತಡಿಯ ಸೇರಲು |
ಸದಮಲಾಶ್ರಮವೊಂದು ಮನಕುರೆ |
ಮುದವ ಬೀರುತ ಗೋಚರಿಪುದಲ್ಲೊರ್ವ ತಾಪಸಿಯು ||
ಪದುಮನಾಭನೆ ಶಬರಿಯೆಂಬವ |
ಳದಿರುನೋಡುತ ನಿನ್ನ ಚರಣವ |
ಪದುಳದಿಂ ಸೇವಿಸುವುದಕೆ ಕಾದಿಹಳು ಪೋಗಲ್ಲಿ ||೫೨||

ಎನುತ ನುಡಿಯುವ ವರಕಬಂಧನ |
ವಿನಯದುಕ್ತಿಗೆ ಮೆಚ್ಚಿ ರಾಮನು |
ಘನಮಹಿಮ ನೀನಿನ್ನು ನಿನ್ನಯ ಲೋಕಕೈದೆನುತ ||
ಅನುಜನೊಡನಲ್ಲಿಂದ ಪೊರಮ |
ಟ್ಟನು ನಯಾನ್ವಿತೆಯಾದ ಶಬರಿಯ |
ವಿನುತನಾದಾಶ್ರಮವ ನರಸುತಮಲ್ಲಿಗೈತಂದ ||೫೩||

ಸಡಗರದೊಳಾಘುನವಿರಕ್ತೆಯು ।
ಮುಡಿಯುಚಾಚುತೆ ರಾಮನಂಘ್ರಿಗೆ ।
ಕಡುದರಿದ್ರಗೆ ನಿಧಿಯುದೊರೆದಂತಾಗಳೊಲವಿನಲಿ ॥
ತಡೆಯುದರ್ಘ್ಯಾದಿಗಳನೀಯುತ ।
ಲಡಿಗಡಿಗೆ ಕೀರ್ತಿಸುತೆ ಕುಣಿಯುತ ।
ಲೊಡನೆ ಫಲಮೂಲಾದಿಗಳ ನಿತ್ತಾಗಳುಪಚರಿಸೆ ॥೫೪॥

ರಾಮನಾತಿಥ್ಯವನು ಕೈಕೊಂ ।
ಡಾಮಹಾವ್ರತೆಗಿರ್ಪ ಭಕ್ತಿಗ ।
ಮಾಮಹಿತ ವೈರಾಗ್ಯಕಂ ಮೆಚ್ಚುತ್ತ ತಲೆದೂಗಿ ॥
ನೇಮವಿತ್ತೆನು ನಿನಗೆ ನೀನಿ ।
ಸ್ನಾಮಹೇಂದ್ರನ ಲೋಕವನು ಮೇಣ್ ।
ಕಾಮಿಸುವ ಲೋಕಾಂತರವನಿರದೊಂದಿ ಸುಖದೊಳಿರು ॥೫೫॥

ಎಂದು ನುಡಿಯಲ್ಕೊಡನೆ ವೃದ್ಧೆಯು ।
ವಂದಿಸುತ ರಘುವರನ ಪದಗಳಿ ।
ಗಂದು ಯಜ್ಞೇಶ್ವರನಿಗಾಹುತಿಯಿತ್ತು ನಿಜತನುವ ॥
ಹಿಂದೆ ತನ್ನಯ ಗುರುಮತಂಗನು ।
ಹೊಂದಿದಾವರಪುಣ್ಯಲೋಕಕೆ ।
ಸಂದು ಸುರುಚಿರಸುಖದೊಳೆಸೆದಳು ಶಬರಿ ಗುಣಲಹರಿ ॥೫೬॥

ಬಳಿಕಲಾ ಮಾತಂಗವನವನು ।
ಕಳೆದು ಮುಂದಿಹ ಗಿರಿಯ ಕಾಣುತ ।
ವಲಿಮುಖೇಂದ್ರನ ಕಾಣುವೆವು ತಾವೆಂಬ ಸಡಗರದೆ ॥
ಲಲಿತಹರ್ಷವನಾಂತು ಭಾಸ್ಕರ ।
ಕುಲಜರೈದುತ ಕೆಲದೊಳೆಸೆವಾ ।
ತಿಲಕಪಾಟಲಿ ಪನಸನಾರಂಗಾದಿ ತರುಗಳೊಳು ॥೫೭॥

ನೆರೆದು ಕುಳಿತಿಹ ಶುಕಪಿಕಂಗಳ ।
ನೆರವಿಯಿಂದೈತಪ್ಪ ಮೃದುಲ ।
ಸ್ವರವನಾಲಿಸುತತಿಮನೋಹರವಾಗಿ ರಂಜಿಸುವ ॥
ಗೊರಟೆ ಸಂಪಗೆಯಾದಿ ಯಾದಾ ।
ತರುಗಳಿಗೆ ಪರ್ಬಿಪ್ಪವನಲತೆ ।
ಭರದೆ ಕುಸುಮಿತವಾಗಿ ಮೊರೆದಿರಲದರ ಮಧ್ಯದಲಿ ॥೫೮॥

ವನಸುಮಂಗಳಮೇಲೆ ಬೀಸು ।
ತ್ತನಿಲನುರೆ ತನಿಗಂಪನಾನುತ ।
ತನುವಿಗಾಪ್ಯಾಯನವ ಮಾಳ್ಪುದ ಕಂಡು ರಘುವರರು ॥
ವಿನುತಚೈತ್ರನ ಮಹಿಮೆಗಿರದುರೆ ।
ಮನದೊಳಾನಂದಿಸುತ ಕಪಿಕುಲ ।
ವನಧಿಚಂದ್ರನ ಕಾಂಬ ತವಕದೊಳೈದಿದರು ಮುಂದೆ ॥೫೯॥

ಾಂಡಂ ಸಂಪೂರ್ಣಂ.